ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ನವೆಂಬರ್ 01, 2020

ಸಂಪುಟ : 47 ಸಂಚಿಕೆ : 182 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com




## ರಾಷ್ಟ್ರೀಯ ಏಕತಾ ದಿನ, ವಾಲ್ಮೀಕಿ ಜಯಂತಿ ಆಚರಣೆ

ದಾವಣಗೆರೆ, ಅ.31- ಜಿಲ್ಲಾಡಳಿತದ ವತಿಯಿಂದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಭಾರತ ಏಕೀಕರಣ ಪಿತಾಮಹ ಸರ್ದಾರ್ ವಲ್ಲಭಬಾಯ್ ಪಟೇಲ್ ಸ್ಮರಣಾರ್ಥ ಪ್ರತಿಜ್ಞಾ ವಿಧಿ ಹಾಗೂ ದಾರ್ಶನಿಕ ಸಂತ ವಾಲ್ಮೀಕಿ ಜಯಂತಿಯನ್ನು ಇಂದು ಸರಳವಾಗಿ ಆಚರಿಸಲಾಯಿತು. ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಪದ್ಮ ಬಸವಂತಪ್ಪ ಹಾಗೂ ವಿವಿಧ ಸಮಾಜಗಳ ಮುಖಂಡರು ಪುಷ್ಪಾರ್ಚನೆಯ ಮೂಲಕ ವಾಲ್ಮೀಕಿ ಭಾವಚಿತ್ರಕ್ಕೆ ವಂದಿಸಿದರು.

ನಂತರ ರಾಷ್ಟ್ರೀಯ ಏಕತೆಯ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ನಗರಾಭಿವೃದ್ಧಿ ಕೋಶದ ಅಧಿಕಾರಿ ನಜ್ಮ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಲಕ್ಷ್ಮಿಕಾಂತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸುರೇಶ್ ರೆಡ್ಡಿ, ನಿರ್ಮಿತಿ ಕೇಂದ್ರದ ವ್ಯವಸ್ಥಾಪಕ ರವಿ, ನಾಯಕ ಸಮಾಜದ ಆಂಜನೇಯ, ಗುಮ್ಮನೂರು ಮಲ್ಲಿಕಾರ್ಜುನ್, ವೀರಣ್ಣ, ಹದಡಿ ಹಾಲಪ್ಪ, ಶ್ಯಾಗಲೆ ಸತೀಶ್, ಮಂಜುನಾಥ್ ಇದ್ದರು.

# ಬಿಎಸ್‌ವೈ ಕೆಳಗಿಳಿಸಲು ಸಾಧ್ಯವಿಲ್ಲ

## ಸಿಎಂ ಬದಲಾವಣೆ ಸುದ್ದಿ ಚುನಾವಣಾ ಗಿಮಿಕ್: ವಿಜಯೇಂದ್ರ

ಬೆಂಗಳೂರು, ಅ. 31 - ಮುಖ್ಯಮಂತ್ರಿ ಸ್ಥಾನದಿಂದ ಅಪ್ಪ ಅವರನ್ನು (ಬಿ.ಎಸ್. ಯಡಿಯೂರಪ್ಪ) ಕೆಳಗಿಳಿಸಲು ಸಾಧ್ಯವಿಲ್ಲ ಎಂದು ಬಿಜೆಪಿಯ ರಾಜ್ಯ ಉಪಾಧ್ಯಕ್ಷ ಹಾಗೂ ಪುತ್ರ ವಿಜಯೇಂದ್ರ ಸ್ಪಷ್ಟಪಡಿಸಿದ್ದಾರೆ.

ಕರ್ನಾಟಕದಲ್ಲಿ ಬಿಜೆಪಿಯ ಸಂಘಟನೆ ಹಾಗು ಪಕ್ಷ ಬಲವರ್ಧನೆಗೆ ಅವರ ಕೊಡುಗೆ ಅನನ್ಯ. ಪಕ್ಷ ಸಂಘಟಿಸುವ ಮೂಲಕ ಸರ್ಕಾರವನ್ನು ತರಲಾಗಿದೆ. ಇದು ಎಲ್ಲರಿಗೂ ತಿಳಿದಿರುವ ವಿಚಾರ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ ಎಂದು ಪಕ್ಷದ ರಾಜ್ಯಾಧ್ಯಕ್ಷ ಕಟೀಲ್ ಅವರು



ಸ್ಪಷ್ಟಪಡಿಸಿದ್ದಾರೆ. ಇದಾದ ನಂತರವೂ ಅಂತಹ ಪ್ರಸ್ತಾಪ ಸರಿಯಲ್ಲ. ಪ್ರತಿಪಕ್ಷದ ನಾಯಕರು ಚುನಾವಣೆ ಗಿಮಿಕ್ ಆಗಿ ಯಡಿಯೂರಪ್ಪ ಅವರ ಬದಲಾವಣೆಯಾಗುತ್ತದೆ ಎಂದು ಹೇಳುತ್ತಾರೆ.

ಆದರೆ, ಪಕ್ಷ ಸಂಘಟನೆ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತರುವುದು ಎಷ್ಟು ಕಷ್ಟ ಎಂಬುದು ಎಲ್ಲರಿಗೂ ತಿಳಿದಿದೆ. ಅವರು ಮುಖ್ಯಮಂತ್ರಿಯಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರು ಒಂದು ಬಾರಿ ಭರವಸೆ ನೀಡಿದರೆ, ಅದು ಈಡೇರಿದಂತೆ ಎಂದು ಖಾಸಗಿ ಚಾನಲ್‌ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಹಲವು ಸಂಕಷ್ಟಗಳು ಎದುರಾಗಿವೆ. ಅದನ್ನು ಅವರು ನಿಭಾಯಿಸುವಲ್ಲಿ ಯಶಸ್ವಿಯಾಗಿದ್ದಾರೆ. ಉತ್ತರ ಕರ್ನಾಟಕ ಮತ್ತು ಮಲೆನಾಡು ಭಾಗದಲ್ಲಿ (5ನೇ ಪುಟಕ್ಕೆ)

## ಕೃಷಿ ಕಾಯ್ದೆ ನಿಷ್ಕ್ರಿಯಕ್ಕೆ ರಾಜಸ್ಥಾನದಲ್ಲಿ ಮಸೂದೆ

ಜೈಪುರ, ಅ. 31 – ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೆ ತಂದಿರುವ ಕೃಷಿ ಸಂಬಂಧದ ಕಾಯ್ದೆಗಳನ್ನು ನಿಷ್ಕ್ರಿಯಗೊಳಿಸುವ ಮೂರು ಮಸೂದೆಗಳನ್ನು ರಾಜಸ್ಥಾನ ಸರ್ಕಾರ ಶನಿವಾರ ಮಂಡಿಸಿದೆ.

ಸಂಸದೀಯ ವ್ಯವಹಾರಗಳ ಸಚಿವ ಶಾಂತಿ ಧಾರಿವಾಲ್ ಅವರು ವಿಧಾನಸಭೆಯಲ್ಲಿ ಮಸೂದೆಗಳನ್ನು ಮಂಡಿಸಿದ್ದಾರೆ.

ಕಾಂಗ್ರೆಸ್ ಆಡಳಿತದ ಪಂಜಾಬ್ ಈಗಾಗಲೇ ಈ ರೀತಿಯ ಮಸೂದೆಗಳನ್ನು ಜಾರಿಗೆ ತಂದಿದೆ. ತನ್ನ ಆಡಳಿತದ ಎಲ್ಲಾ ರಾಜ್ಯಗಳಲ್ಲಿ ಕೇಂದ್ರ ಸರ್ಕಾರದ ಕಾಯ್ದೆಗಳನ್ನು ನಿಷ್ಕ್ರಿಯಗೊಳಿಸಲಾಗುವುದು ಎಂದು ಪಕ್ಷ ತಿಳಿಸಿದೆ.

## ಐಕ್ಯತಾ ಪ್ರತಿಮೆ, ಸಮುದ್ರ ವಿಮಾನ ಉದ್ಘಾಟಿಸಿದ ಪ್ರಧಾನಿ

ಕೆವಾಡಿಯಾ (ಗುಜರಾತ್), ಅ. 31 – ಗುಜರಾತ್‌ನ ನರ್ಮದ ಜಿಲ್ಲೆಯಲ್ಲಿರುವ ಐಕ್ಯತಾ ಪ್ರತಿಮೆ ಹಾಗೂ ಅಹಮದಾಬಾದ್‌ನ ನದಿ ದಡದಲ್ಲಿರುವ ಸಾಬರಮತಿ ಆಶ್ರಮದ ನಡುವೆ ಸಂಚರಿಸಲು ಸಮುದ್ರವಿಮಾನ ಸೇವೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಚಾಲನೆ ನೀಡಿದ್ದಾರೆ.

ಸರ್ದಾರ್ ಸರೋವರ್ ಅಣೆಕಟ್ಟೆಯ ಬಳಿ ಇರುವ ಕೊಳದಿಂದ ಎರಡು ಇಂಜಿನ್‌ಗಳ ವಿಮಾನದಲ್ಲಿ ಹಾರುವ ಮೂಲಕ ಪ್ರಧಾನಿ ಈ ಸೇವೆಗೆ ಚಾಲನೆ ನೀಡಿದ್ದಾರೆ. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದಂದು ಈ ಸೇವೆಗೆ ಚಾಲನೆ ನೀಡಲಾಗಿದೆ. ಸರ್ದಾರ್ ಜನ್ಮ ದಿನವನ್ನು (5ನೇ ಪುಟಕ್ಕೆ)

## ಹಿಂದುತ್ವ ಗೆದ್ದರೆ ಭಾರತದ ವಿಚಾರಧಾರೆಗೆ ಸೋಲು

### ಕಾಂಗ್ರೆಸ್ ನಾಯಕ ಶಶಿ ಥರೂರ್

ನವದೆಹಲಿ, ಅ. 31 – ಹಿಂದುತ್ವ ಅಭಿಯಾನದಲ್ಲಿ 1947ರ ಮುಸ್ಲಿಮ್ ಕೋಮುವಾದದ ಛಾಯೆ ಇದೆ. ಹಿಂದುತ್ವ ಗೆದ್ದರೆ ಭಾರತದ ವಿಚಾರಧಾರೆಗೆ ಸೋಲಾಗಲಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ಶಶಿ ಥರೂರ್ ಹೇಳಿದ್ದಾರೆ. ಹಿಂದೂ ಭಾರತವು ಹಿಂದೂವೇ ಅಲ್ಲ. (5ನೇ ಪುಟಕ್ಕೆ)

## ಗೋವಾದಲ್ಲಿ ಪಡಿತರ ಮೂಲಕ ಈರುಳ್ಳಿ

ಪಣಜಿ, ಅ. 31 – ಪಡಿತರದಾರರಿಗೆ ಈರುಳ್ಳಿಯನ್ನು ಕೆಜಿಗೆ 32 ರೂ.ಗಳಂತೆ ವಿತರಿಸಲಾಗುವುದು ಎಂದು ಗೋವಾ ಸರ್ಕಾರ ತಿಳಿಸಿದೆ.

ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಪೂರೈಕೆದಾರರಿಂದ ಇದಕ್ಕಾಗಿ 1,045 ಮೆಟ್ರಿಕ್ ಟನ್ ಈರುಳ್ಳಿ ಖರೀದಿಸಲಾಗುವುದು ಎಂದು ರಾಜ್ಯ (5ನೇ ಪುಟಕ್ಕೆ)

# ಕನ್ನಡ, ಭಾಷೆಯಷ್ಟೇ ಎಂದು ಭಾವಿಸುವುದು ಹೆಡ್ಡತನ

### ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಎಂ.ಎ.ಹೆಗಡೆ

ದಾವಣಗೆರೆ, ಅ. 31 - ಇಂಗ್ಲಿಷ್ ಮಾಧ್ಯಮದ ವ್ಯಾಮೋಹದಿಂದಾಗಿ ಕನ್ನಡ ಕನಿಷ್ಠ ಎಂಬ ಭಾವನೆ ಬೆಳೆಯುತ್ತಿದೆ, ಕನ್ನಡದ ಮಕ್ಕಳು ತಮ್ಮನ್ನು ತಾವು ತಿರಸ್ಕಾರದಿಂದ ನೋಡುತ್ತಿದ್ದಾರೆ ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಎಂ.ಎ. ಹೆಗಡೆ ವಿಷಾದಿಸಿದ್ದಾರೆ.

ನಗರದ ಕಲಾಕುಂಚ ಹಾಗೂ ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಕನ್ನಡ ಕುವರ - ಕುವರಿ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕನ್ನಡ ಭಾಷೆಯಷ್ಟೇ ಎಂದು ಭಾವಿಸುವುದು ಹೆಡ್ಡತನ. ಕನ್ನಡ ಸಂಸ್ಕೃತಿ ಬಿಂಬಿಸುತ್ತದೆ, ತನ್ನದೇ ಆದ ಇತಿಹಾಸ ಹಾಗೂ ಪರಂಪರೆ ಹೊಂದಿದೆ. ಅದು ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುತ್ತದೆ ಎಂದವರು ಹೇಳಿದರು.

ಹೀಗಾಗಿ ಕನ್ನಡ ಬಿಟ್ಟು ಬೇರೆ ಮಾಧ್ಯಮದ ಕಡೆ ಹೋದರೆ, ಸಂಸ್ಕೃತಿಯ ಕೊಂಡಿಗಳು ಕಳಚುತ್ತಾ ಹೋಗುತ್ತವೆ ಎಂದ ಅವರು, ಕನ್ನಡ ಮಾಧ್ಯಮದ ಮಕ್ಕಳಲ್ಲಿ ಈ ನಾಡಿನ ಸಂಸ್ಕೃತಿ ಹಾಗೂ ಭಾರತೀಯತೆ ಕಾಣುತ್ತದೆ ಎಂದು ಪ್ರತಿಪಾದಿಸಿದರು.

ಚೂರು ಪಾರು ತಿಂಡಿಗಾಗಿ ಬೆಳೆಸಿದವರನ್ನು ಬಿಟ್ಟು ಪಕ್ಕದ ಮನೆಗೆ ಹೋಗುವ ಶ್ವಾನದ ರೀತಿಯಲ್ಲಿ, ನಾವೂ ಹೊಟ್ಟೆಪಾಡಿಗೆ ಸಿಗುವ ಲಾಭಕ್ಕಾಗಿ ಅನ್ನ, ಜೀವ ನೀಡುವ ಹಾಗೂ ಸಾಕಿ ಸಲಹುವ ಕನ್ನಡ ಮಾತೆಯನ್ನು ಬಿಟ್ಟು ಬೇರೆಡೆ ಹೋಗುತ್ತಿದ್ದೇವೆ ಎಂದವರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸನ್ಮಾನಿತರಾಗಿ ಮಾತನಾಡಿದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಘೋಷಿತರಾಗಿರುವ ಡಾ. ಎಂ.ಜಿ. (2ನೇ ಪುಟಕ್ಕೆ)






# ಬಿ.ಎಲ್. ವೇಣು, ಸಿರಿಗೆರೆ ತಿಪ್ಪೇಶ್ ಸೇರಿ ಐವರಿಗೆ ವಾಲ್ಮೀಕಿ ಪ್ರಶಸ್ತಿ





ಬೆಂಗಳೂರು, ಅ. 31- ಮಹರ್ಷಿ ವಾಲ್ಮೀಕಿಯವರ ಜಯಂತ್ಯೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಪ್ರತಿ ವರ್ಷ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ನೀಡುತ್ತಿದ್ದು, 2020ನೇ ಸಾಲಿನ ಪ್ರತಿಷ್ಠಿತ ಈ ಪ್ರಶಸ್ತಿಗೆ ಐವರನ್ನು ಪ್ರಾದೇಶಿಕ ವಿಭಾಗವಾರು ಆಯ್ಕೆ ಮಾಡಲಾಗಿದೆ.

ಬೆಳಗಾವಿ ವಿಭಾಗದಿಂದ ಧಾರವಾಡದ ಡಾ. ಕೆ. ಆರ್. ಪಾಟೀಲ್ ಬೆಂಗಳೂರು ವಿಭಾಗದಿಂದ ಚಿತ್ರದುರ್ಗದ ಹಿರಿಯ ಸಾಹಿತಿ ಡಾ. ಬಿ.ಎಲ್. ವೇಣು, ಮೈಸೂರು ವಿಭಾಗದಿಂದ ಶ್ರೀಮತಿ ಗೌರಿ ಕೊರಗೆ, ಕಲಬುರಗಿ ವಿಭಾಗದಿಂದ ಮಾರಪ್ಪ ನಾಯಕ, ಬೆಂಗಳೂರು ಕೇಂದ್ರ ಸ್ಥಾನದಿಂದ ಮೂಲತಃ ಚಿತ್ರದುರ್ಗ ಜಿಲ್ಲೆಯ ಸಿರಿಗೆರೆ ಗ್ರಾಮದ ಸಿರಿಗೆರೆ ತಿಪ್ಪೇಶ್ ಅವರುಗಳು ಸರ್ಕಾರ ಕೊಡಮಾಡುವ ರಾಜ್ಯ ಮಟ್ಟದ ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಕೊರೊನಾ ಮತ್ತು ಚುನಾವಣಾ ನೀತಿ ಸಂಹಿತೆ ಕಾರಣ ವಾಲ್ಮೀಕಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ನಡೆಸಲಾಗುವುದು ಎಂದು ಹೇಳಲಾಗಿದೆ. ಪ್ರಶಸ್ತಿಯು 5 ಲಕ್ಷ ರೂ. ನಗದು, ಚಿನ್ನದ ಪದಕ ಮತ್ತು ಪ್ರಶಸ್ತಿ ಪತ್ರವನ್ನು ಹೊಂದಿರುತ್ತದೆ.

ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಇಂದಿಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ (5ನೇ ಪುಟಕ್ಕೆ)

## ತಮಿಳುನಾಡಿನಲ್ಲಿ ನ.16ರಿಂದ ಶಾಲಾ - ಕಾಲೇಜು ಆರಂಭ

ಚೆನ್ನೈ, ಅ. 31 – ನವೆಂಬರ್ 16 ರಿಂದ ಶಾಲಾ - ಕಾಲೇಜುಗಳನ್ನು ಆರಂಭಿಸುವುದಾಗಿ ತಮಿಳುನಾಡು ಸರ್ಕಾರ ತಿಳಿಸಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಕೆ. ಪಳನಿಸ್ವಾಮಿ, ಶಾಲೆಗಳು, ಎಲ್ಲಾ ಕಾಲೇಜುಗಳು ಸಂಶೋಧನಾ ಕೇಂದ್ರಗಳು ಮತ್ತಿತರೆ ಶಿಕ್ಷಣ ಸಂಸ್ಥೆಗಳು ಹಾಗೂ ಹಾಸ್ಟೆಲ್‌ಗಳು ಅಂದಿನಿಂದ ಆರಂಭವಾಗಲಿವೆ ಎಂದು ತಿಳಿಸಿದ್ದಾರೆ. ಸಿನೆಮಾ, ಮೋಜಿನ ಪಾರ್ಕ್‌ಗಳು ಹಾಗೂ ಪ್ರಾಣಿ ಸಂಗ್ರಹಾಲಯಗಳನ್ನೂ ಸಹ ಆರಂಭಿಸಲಾಗುವುದು. ಇದಕ್ಕಾಗಿ ಮಾರ್ಗಸೂಚಿಗಳನ್ನು ಅನ್ವಯಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

# ನಾಡು ಕಂಡ ಅಪ್ರತಿಮ ಕವಿ ವಾಲ್ಮೀಕಿ



### ಹರಿಹರದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಎಸ್.ರಾಮಪ್ಪ

ಹರಿಹರ, ಅ.31- ನಾಡು ಕಂಡ ಅಪ್ರತಿಮ ಕವಿ ಮಹರ್ಷಿ ವಾಲ್ಮೀಕಿ. ಅವರ ಆದರ್ಶ ಮತ್ತು ತತ್ವಗಳನ್ನು ಇಂದಿನ ಯುವಕರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅದನ್ನು ಪಾಲನೆ ಮಾಡುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಹಾಕಬೇಕು ಎಂದು ಶಾಸಕ ಎಸ್. ರಾಮಪ್ಪ ಅಭಿಪ್ರಾಯಪಟ್ಟರು.

ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಇಂದು ನಡೆದ ವಾಲ್ಮೀಕಿ ಜಯಂತಿ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಾಲ್ಮೀಕಿ ಸಮಾಜದ ನಗರ ಘಟಕದ ಅಧ್ಯಕ್ಷ ಕೆ.ಬಿ. ಮಂಜುನಾಥ್ ಮಾತನಾಡಿ, ಸರ್ಕಾರವು ವಾಲ್ಮೀಕಿ ಜಯಂತಿಯಂದು ಫೋಟೋ ಪೂಜೆ ಮಾಡಿ ಹಾರವನ್ನು ಹಾಕಿದರೆ ವಾಲ್ಮೀಕಿ ಸಮಾಜಕ್ಕೆ ಗೌರವವನ್ನು ನೀಡಿದಂತಾಗುವುದಿಲ್ಲ, ಬದಲಾಗಿ ಸಮಾಜಕ್ಕೆ ಮೀಸಲಾತಿ ಹೆಚ್ಚಳ ಮಾಡಿದರೆ ಮಾತ್ರ ನಮ್ಮ ವಾಲ್ಮೀಕಿ ಸಮಾಜಕ್ಕೆ ಗೌರವ ನೀಡಿದಂತಾಗುತ್ತದೆ ಎಂದರು.

ಜೆಡಿಎಸ್ ಮುಖಂಡ ವಕೀಲ (2ನೇ ಪುಟಕ್ಕೆ)

## 2ನೇ ವರ್ಷದ ಪುಣ್ಯಸ್ಮರಣೆ



ಜನನ : 01.04.1933 ಮರಣ : 01.11.2018

ದಾವಣಗೆರೆಯ ಗಣ್ಯವರ್ತಕರೂ ಮತ್ತು
ಬಾಪೂಜಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷರೂ ಆಗಿದ್ದ

### ಶ್ರೀ ಮುದೇಗೌಡ್ರು ರೇವಣಸಿದ್ದಪ್ಪ

ಅವರು ನಿಧನರಾಗಿ ಇಂದಿಗೆ (ದಿನಾಂಕ 01.11.2020)
ಎರಡು ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತ್ನಿ : ಶ್ರೀಮತಿ ದೇವೀರಮ್ಮ ಮುದೇಗೌಡ್ರು
ಮಕ್ಕಳು, ಸೊಸೆಯಂದಿರು :
ಶ್ರೀ ಶಿವಕುಮಾರ್ ಮುದೇಗೌಡ್ರು, ಶ್ರೀಮತಿ ಸುನಂದ,
ಡಾ|| ಬಸವರಾಜ್ ಮುದೇಗೌಡ್ರು, ಶ್ರೀಮತಿ ಗೀತಾ, (Qatar)
ಶ್ರೀ ಸಿದ್ದರಾಮೇಶ್ವರ ಮುದೇಗೌಡ್ರು, ಶ್ರೀಮತಿ ಜಯಶ್ರೀ
ಶ್ರೀ ಸುರೇಶ್‌ಬಾಬು ಮುದೇಗೌಡ್ರು,
ಶ್ರೀಮತಿ ರೇಖಾ, ಶ್ರೀಮತಿ ಅಕ್ಷತಾ
ಮೊಮ್ಮಕ್ಕಳು : ಶ್ರೀಮತಿ ಸುಷ್ಮ, ಶ್ರೀ ಸಂತೋಷ್
ಶ್ರೀಮತಿ ಡಾ|| ಸೌಮ್ಯ, ಡಾ|| ರಜನಿಕಾಂತ್ , ಶ್ರೀಮತಿ ಕೈಲಿ (Kylie)
ಶ್ರೀ ವರುಣ್ ಎಂ.ಬಿ. North Corolina (USA)
ಆಶೀಶ್ ಎಂ.ಬಿ. Washington, D.C. (USA),
ನಿಶಾ, ನಿಖಿಲ್ ಮುದೇಗೌಡ್ರು, ಕು|| ಪೂಜಾ ಮುದೇಗೌಡ್ರು,
Little Rock, (USA), ಪ್ರೀತಲ್, ಅಕಾಂಕ್ಷಾ ಎಂ.
ಮರಿಮೊಮ್ಮಕ್ಕಳು : ಸ್ತುತಿ, ದ್ವಿಜ್, ದ್ವಿತಿ, ನಿಯಮ್ ಎಂ.

ದಿ|| ಮುದೇಗೌಡ್ರ ಸಿದ್ದಲಿಂಗಪ್ಪ ಮತ್ತು ಕುಟುಂಬ ವರ್ಗ
ಮುದೇಗೌಡ್ರ ಮನೆತನದವರು




# ಹರಪನಹಳ್ಳಿ : ಎಸ್ಟಿಗೆ ಮೀಸಲಾತಿ ಹೆಚ್ಚಳಕ್ಕೆ ಒತ್ತಾಯಿಸಿ ಉಪವಿಭಾಗಾಧಿಕಾರಿಗೆ ಮನವಿ



ಹರಪನಹಳ್ಳಿ, ಅ.31- ಪರಿಶಿಷ್ಟ ಪಂಗಡದವರಿಗೆ ಶೈಕ್ಷಣಿಕ, ಔದ್ಯೋಗಿಕ ಮೀಸಲಾತಿ ಪ್ರಮಾಣ ಶೇ.3 ರಿಂದ ಶೇ.7.5 ಕ್ಕೆ ಹೆಚ್ಚಳ ಹಾಗೂ ನ್ಯಾ.ನಾಗಮೋಹನ್‌ದಾಸ್ ವರದಿಯನ್ನು ಸಚಿವ ಸಂಪುಟದಲ್ಲಿ ಅನುಮೋದಿಸಿ ಆದೇಶ ಹೊರಡಿಸುವಂತೆ ಒತ್ತಾಯಿಸಿ, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದಿಂದ ಉಪವಿಭಾಗಾಧಿಕಾರಿಯವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚಂಗೆಪ್ಪ ಮಾತನಾಡಿ, ನಿವೃತ್ತ ನ್ಯಾ. ಹೆಚ್.ಎನ್. ನಾಗಮೋಹನ್‌ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಆಯೋಗವು ಪರಿಶಿಷ್ಟ ಜಾತಿಗೆ ಶೇ.15 ರಿಂದ ಶೇ.17 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ. 3 ರಿಂದ ಶೇ. 7.5 ರಷ್ಟು ಮೀಸಲಾತಿ ಹೆಚ್ಚಿಸುವಂತೆ ಸಮಗ್ರ ವರದಿ ಸಲ್ಲಿಸಿದರೂ ಕೂಡ ಸರ್ಕಾರ ಮೀನಾಮೇಷ ಮಾಡುತ್ತಿರುವುದು ಸರಿಯಲ್ಲ ಎಂದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಗೌರವ ಅಧ್ಯಕ್ಷೆ ಟಿ. ಪದ್ಮಾವತಿ ಮಾತನಾಡಿ, ಈಗಾಗಲೇ ಕೇಂದ್ರ ಸರ್ಕಾರ ಪರಿಶಿಷ್ಟ ಪಂಗಡದವರಿಗೆ ಶೇ.7.5 ಮೀಸಲಾತಿ ನೀಡಿದ್ದು, ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೈಕ್ಷಣಿಕ ಹಾಗೂ ಉದ್ಯೋಗದ ಮೀಸಲಾತಿಯನ್ನು ನೀಡಬೇಕಿದ್ದು, ನ್ಯಾ. ನಾಗಮೋಹನ್‌ದಾಸ್ ವರದಿ ಪ್ರಕಾರ ನಿರ್ಧಾರ ಕೈಗೊಳ್ಳಲು ರಾಜ್ಯ ಸರ್ಕಾರಕ್ಕೆ ಮುಕ್ತ ಅಧಿಕಾರವಿದ್ದು, ಮುಖ್ಯಮಂತ್ರಿಗಳು ಸಚಿವ ಸಂಪುಟದ ಸಭೆ ನಡೆಸಿ ಮೀಸಲಾತಿ ಅನುಷ್ಠಾನಗೊಳಿಸಬೇಕೆಂದರು.

ಮಡಿವಾಳ ಸಮಾಜದ ಜಿಲ್ಲಾ ಅಧ್ಯಕ್ಷ ಎಂ. ಉಮಾಪತಿ, ವಾಲ್ಮೀಕಿ ನಾಯಕ ಸಮಾಜದ ಮಹಿಳಾ ಅಧ್ಯಕ್ಷೆ ಕಂಚಿಕೇರಿ ಜಯಲಕ್ಷ್ಮಿ, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಉಪಾಧ್ಯಕ್ಷ ಶಿವಾನಂದ, ಕಾರ್ಯದರ್ಶಿ ತೆಲಗಿ ಜಿ. ನಾಗರಾಜ್, ಏಕಲವ್ಯ ಸಂಘರ್ಷ ಸಮಿತಿ ಅಧ್ಯಕ್ಷ ಆರ್. ಪ್ರಕಾಶ್, ತಾಲ್ಲೂಕು ಪಂಚಾಯತಿ ಸದಸ್ಯ ವೈ. ಬಸಪ್ಪ, ಜಿಲ್ಲಾ ಎಸ್ಟಿ ಮೋರ್ಚಾ ಕಾರ್ಯದರ್ಶಿ ಆರ್.ಲೋಕೇಶ್, ತಾಲ್ಲೂಕು ಬಿ ಜೆ ಪಿ ಎಸ್ಟಿ ಮೋರ್ಚಾ ಅಧ್ಯಕ್ಷ ಟಿ. ಮನೋಜ್, ಮುಖಂಡರಾದ ಮಂಡಕ್ಕಿ ಸುರೇಶ್, ಪಿ.ಅರುಣ್‌ಕುಮಾರ್, ಮಹಿಳಾ ಸಂಘಟನೆಯ ಹೆಚ್.ಎ. ಶಾಲಿನಿ, ಮಂಜುಳಾ, ಹನುಮಕ್ಕ, ಪವಿತ್ರ, ಯೋಗೀಶ್, ನಂದಿಬೇವೂರು ರಾಜಪ್ಪ, ಸದಸ್ಯ ಬಿ. ಅಂಜಿನಪ್ಪ, ಶಿವರಾಜು, ಸಾಸ್ವಿಹಳ್ಳಿ ನಾಗರಾಜ್, ಹರಿಯಮ್ಮನಹಳ್ಳಿ ಮಂಜುನಾಥ್ ಸೇರಿದಂತೆ ಇತರರಿದ್ದರು.

## ಮಂಗಳೂರು ವಿಮಾನ ನಿಲ್ದಾಣ ಅದಾನಿಗೆ ಹಸ್ತಾಂತರ



ನವದೆಹಲಿ ಅ. 31 – ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಶುಕ್ರವಾರದಂದು ಮಂಗಳೂರು ವಿಮಾನ ನಿಲ್ದಾಣವನ್ನು 50 ವರ್ಷಗಳ ಗುತ್ತಿಗೆಗಾಗಿ ಅದಾನಿ ಸಮೂಹಕ್ಕೆ ಹಸ್ತಾಂತರಿಸಿದೆ.

2019ರಲ್ಲಿ ಕೇಂದ್ರ ಸರ್ಕಾರ ಮಂಗಳೂರು ಸೇರಿದಂತೆ ಆರು ಪ್ರಮುಖ ವಿಮಾನ ನಿಲ್ದಾಣಗಳನ್ನು ಖಾಸಗಿ ವಲಯಕ್ಕೆ ನೀಡುವುದಾಗಿ ತಿಳಿಸಿತ್ತು. ಬಿಡ್ಡಿಂಗ್ ಪ್ರಕ್ರಿಯೆಯ ನಂತರ ಅದಾನಿ ಸಮೂಹ ಎಲ್ಲಾ ವಿಮಾನ ನಿಲ್ದಾಣಗಳ ಗುತ್ತಿಗೆ ಪಡೆದುಕೊಂಡಿದೆ.

# ನಾಗಮೋಹನ್ ದಾಸ್ ವರದಿ ಜಾರಿಗೆ ಹರಿಹರ ತಾ. ವಾಲ್ಮೀಕಿ ಸಮಾಜ ಮನವಿ



ಹರಿಹರ, ಅ.31- ಪರಿಶಿಷ್ಟ ಪಂಗಡದವರಿಗೆ ಶೈಕ್ಷಣಿಕ ಹಾಗೂ ಔದ್ಯೋಗಿಕ ಮೀಸಲಾತಿ ಪ್ರಮಾಣ ಶೇ. 3 ರಿಂದ ಶೇ 7.5ಕ್ಕೂ ಹೆಚ್ಚಳ ಮಾಡಬೇಕು ಹಾಗೂ ನ್ಯಾ. ನಾಗಮೋಹನ್ ದಾಸ್ ವರದಿಯನ್ನು ಸಚಿವ ಸಂಪುಟದಲ್ಲಿ ಅನುಮೋದಿಸಿ ಆದೇಶವನ್ನು ಆದಷ್ಟು ಬೇಗನೇ ಹೊರಡಿಸುವಂತೆ ಆಗ್ರಹಿಸಿ, ತಾಲ್ಲೂಕು ವಾಲ್ಮೀಕಿ ಸಮಾಜದ ವತಿಯಿಂದ ಶಾಸಕ ಎಸ್. ರಾಮಪ್ಪ ಮತ್ತು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರುಗಳಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ವಾಲ್ಮೀಕಿ ಸಮಾಜದ ಅಧ್ಯಕ್ಷ ಕೆ.ಬಿ. ಮಂಜುನಾಥ್ ಮಾತನಾಡಿ, ನ್ಯಾ. ನಾಗಮೋಹನ್ ದಾಸ್ ಏಕ ಸದಸ್ಯ ಆಯೋಗವು ಸಂಘ, ಸಂಸ್ಥೆಗಳ ಅಹವಾಲು ಸ್ವೀಕರಿಸಿ, ಅನೇಕ ಸಭೆಗಳನ್ನು ಮುಕ್ತವಾಗಿ ನಡೆಸಿ ವಿಭಾಗೀಯ ಮಟ್ಟದಲ್ಲಿ ಮನವಿಗಳನ್ನು ಸ್ವೀಕರಿಸಿ, ಒಂದು ವರ್ಷ ಸಮಗ್ರವಾಗಿ ಅಧ್ಯಯನ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಇದನ್ನು ಅನುಮೋದಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ಕೆ. ಆರ್. ರಂಗಪ್ಪ ಮಾತನಾಡಿ, ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ. 3 ರಿಂದ ಶೇ. 7.5 ಕ್ಕೆ ಹೆಚ್ಚು ಮಾಡುವ ಬಗ್ಗೆ ಸುದೀರ್ಘ ಚರ್ಚಿಸಿ ಆಯೋಗದ ವರದಿ ನೀಡಿ 2 ತಿಂಗಳಾದರೂ ಸರ್ಕಾರ ಸಕಾರಾತ್ಮಕ ನಿರ್ಧಾರ ಕೈಗೊಳ್ಳುವಲ್ಲಿ ವಿಳಂಬ ಮಾಡುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಮಾರುತಿ ಬೇಡರ್, ಮಕ್ರಿ ಪಾಲಾಕ್ಷಪ್ಪ, ರಾಜು ಇಂದ್ರಾನಗರ, ಮಾರುತಿ, ಪರಶುರಾಮ್, ನಗರಸಭೆ ಸದಸ್ಯ ದಿನೇಶ್ ಬಾಬು, ದೇವೇಂದ್ರಪ್ಪ, ಬಸವರಾಜ್, ಕರಿಬಸಪ್ಪ ಬಾವಿಕಟ್ಟಿ ಹಾಗೂ ಇತರರು ಹಾಜರಿದ್ದರು.

## ಪತ್ರಕರ್ತ ಜಗದೀಶ್ ವಿರುದ್ಧ ಮೊಕದ್ದಮೆ

ದಾವಣಗೆರೆ, ಅ.31- ವಂಚನೆ ಪ್ರಕರಣದ ಹಿನ್ನೆಲೆಯಲ್ಲಿ ಪತ್ರಕರ್ತ ಜಗದೀಶ್ ವಿರುದ್ಧ ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಾಗಿದೆ. ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಸಲು ಸಂಬಂಧಿಸಿದ ಇಲಾಖೆಯಿಂದ ಹಣ ಮಂಜೂರು ಮಾಡಿಸುವುದಾಗಿ ರೈತರನ್ನು ನಂಬಿಸಿ ಹಣ ವಸೂಲಿ ಮಾಡಿರುವ ಹಿನ್ನೆಲೆಯಲ್ಲಿ ಪ್ರಕರಣ ದಾಖಲಾಗಿದೆ.


|| ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ||


**ಕೈಲಾಸ ಶಿವಗಣಾರಾಧನೆ ಆಹ್ವಾನ**

ದಾವಣಗೆರೆ ಸಿಟಿ ಶಾಮನೂರು ವಾಸಿ

**ಶ್ರೀಮತಿ ಗಿರಿಜಮ್ಮ, ಶ್ರೀ ಎಸ್.ಜಿ. ಮುದೇಗೌಡಪ್ಪ**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 28.10.2020ನೇ ಬುಧವಾರ ರಾತ್ರಿ 8.30ಕ್ಕೆ ನಮ್ಮ ಪುತ್ರ



**ಶ್ರೀ ಎಸ್.ಜಿ. ಪ್ರವೀಣ್**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 01.11.2020ನೇ ಭಾನುವಾರ ಬೆಳಿಗ್ಗೆ 10.30 ಕ್ಕೆ ಶಾಮನೂರಿನ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಶ್ರೀಮತಿ ಗಿರಿಜಮ್ಮ, ಶ್ರೀ ಎಸ್.ಜಿ. ಮುದೇಗೌಡಪ್ಪ ಮತ್ತು ಮಕ್ಕಳು, ಮೃತರ ಪತ್ನಿ ಶ್ರೀಮತಿ ವಸಂತ ಮತ್ತು ಕು. ಸಹನ, ಚಿ. ಶಶಾಂಕ್, ಗೌಡ್ರ ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು.

ಮೊ. 98447-11749, 63630-32183


## ಅಪ್ರತಿಮ ಕವಿ ವಾಲ್ಮೀಕಿ



**(1ನೇ ಪುಟದಿಂದ)** ಮಾರುತಿ ಬೇಡರ್ ಮಾತನಾಡಿ, ಮಹರ್ಷಿ ವಾಲ್ಮೀಕಿಯವರು ರಾಮಾಯಣ ಕೃತಿಯನ್ನು ರಚಿಸಿ ದೇಶಕ್ಕೆ ಒಳ್ಳೆಯ ಸಂಸ್ಕೃತಿಯ ಕೊಡುಗೆ ನೀಡಿದ್ದಾರೆ. ಇವತ್ತಿಗೂ ಸಾರ್ವಜನಿಕರು ಅದನ್ನು ಪಾಲನೆ ಮಾಡಿಕೊಂಡು ಹೊರಟಿದ್ದಾರೆ. ಇಂತಹ ಮಹಾನ್ ನಾಯಕರ ಸಮಾಜಕ್ಕೆ ಸರ್ಕಾರ ಮೀಸಲಾತಿಯನ್ನು ಶೇ. 7.5ಕ್ಕೆ ಹೆಚ್ಚಳ ಮಾಡುವುದಕ್ಕೆ ಮೀನಾ-ಮೇಷ ಮಾಡುತ್ತಿರುವುದು ಸರಿಯಾದ ಬೆಳವಣಿಗೆಯಲ್ಲ ಎಂದು ಹೇಳಿದರು.

ಅಕ್ಷರ ದಾಸೋಹ ಇಲಾಖೆಯ ಅಧಿಕಾರಿ ರಾಮಕೃಷ್ಣಪ್ಪ ಮಾತನಾಡಿ, ವಾಲ್ಮೀಕಿ ಮಹರ್ಷಿಗಳು ಸಮಾಜದಲ್ಲಿ ಸುಧಾರಣೆ ತರಲು ಅನೇಕ ಕೃತಿಗಳನ್ನು ರಚಿಸಿ ಸರ್ವರಲ್ಲೂ ಜ್ಞಾನ ತುಂಬುವ ಕೆಲಸವನ್ನು ಮಾಡಿದ್ದರಿಂದ ವಿಶ್ವಮಟ್ಟದಲ್ಲಿ ಹೆಸರನ್ನು ಮಾಡುವುದಕ್ಕೆ ದಾರಿಯಾಯಿತು. ವಿಶ್ವಮಾನವರಾದ ವಾಲ್ಮೀಕಿ ಒಂದು ಜಾತಿಗೆ ಸೀಮಿತವಾಗಿ ಯಾವುದೇ ಕೆಲಸವನ್ನು ಮಾಡಿರುವುದಿಲ್ಲ. ವಿಶ್ವದ ಒಳಿತಿಗಾಗಿ ಕೆಲಸವನ್ನು ಮಾಡಿದರು. ಅಂತಹ ಮಹಾನ್ ನಾಯಕರು ಒಂದೇ ಜಾತಿಗೆ ಮಾತ್ರ ಮೀಸಲು ಅಲ್ಲ. ಅವರು ವಿಶ್ವದ ಪ್ರಬುದ್ಧ ವ್ಯಕ್ತಿಗಳ ಸಾಲಿನಲ್ಲಿ ಇವರು ಒಬ್ಬರು ಎಂದು ಹೇಳಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ಮಹರ್ಷಿ ವಾಲ್ಮೀಕಿಯವರು ಪಿತೃವಾಕ್ಯ ಪರಿಪಾಲನೆ, ರಾಮನ ಏಕ ಪತ್ನಿ ವ್ರತದ ಬಗ್ಗೆ ಲಕ್ಷ್ಮಣ ಕೊಟ್ಟ ಮಾತು ಉಳಿಸಿಕೊಳ್ಳುವಿಕೆ ಇವುಗಳ ಬಗ್ಗೆ ರಾಮಾಯಣ ಮೂಲಕ ಜನರನ್ನು ತಿದ್ದುವ ಕಾರ್ಯವನ್ನು ಮಾಡಿದ್ದಾರೆ. ಇಂತಹ ಮಹಾನ್ ವ್ಯಕ್ತಿಗಳ ಮಾನವೀಯ ಮೌಲ್ಯಗಳನ್ನು ಇಂದಿನ ಜನಾಂಗವು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ರಂಗಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ರಾಜನಹಳ್ಳಿ ಗುರು ಪೀಠದ ಆಡಳಿತಾಧಿಕಾರ ಟಿ. ಓಬಳಪ್ಪ, ನಗರಸಭೆ ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಪರಮೇಶ್ವರಪ್ಪ, ನಗರಸಭೆ ಸದಸ್ಯ ದಿನೇಶ್ ಬಾಬು, ಎಂ.ಎಸ್. ಬಾಬುಲಾಲ್, ದೇವೇಂದ್ರಪ್ಪ, ಬಸವರಾಜ್, ಮಕ್ರಿ ಪಾಲಾಕ್ಷಪ್ಪ, ಪರಶುರಾಮ್, ಮಂಜುನಾಥ್, ಮಾರುತಿ ಬರ್ಕಿ, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಅಂಗಡಿ ರೇವಣಸಿದ್ದಪ್ಪ, ಎಮ್.ವಿ. ಹೊರಕೇರಿ, ಉಮ್ಮಣ್ಣ, ಆಟೋ ರಾಜು ಮತ್ತಿತರರು ಹಾಜರಿದ್ದರು.

# ಕನ್ನಡ ಭಾಷೆಯಷ್ಟೇ ಎಂದು ಭಾವಿಸುವುದು ಹೆಡ್ಡತನ



**(1ನೇ ಪುಟದಿಂದ)** ಈಶ್ವರಪ್ಪ, ಕನ್ನಡ ಉದ್ಯೋಗದ - ಅನ್ನದ ಭಾಷೆಯಾಗಿ ಮಾಡಲು ಸಾಧ್ಯವಾದರೆ ಮಾತ್ರ ಕನ್ನಡ ಉಳಿಯಲು ಸಾಧ್ಯ. ಇದು ಸರ್ಕಾರದಿಂದ ಹಿಡಿದು ಶಿಕ್ಷಕರು, ವಿದ್ಯಾರ್ಥಿಗಳನ್ನು ಒಳಗೊಂಡು ಎಲ್ಲರೂ ಮಾಡಬೇಕಾದ ಕೆಲಸ ಎಂದರು. ಕನ್ನಡ ಭಾಷೆಯಿಂದ ಮಾತ್ರ ವಿದ್ಯಾರ್ಥಿಗಳ ಹೃದಯ ವಿಕಾಸ ಮಾಡಲು ಸಾಧ್ಯ. ವಿಜ್ಞಾನ, ಸಮಾಜ ವಿಜ್ಞಾನ ಮತ್ತಿತರೆ ವಿಷಯಗಳಿಂದ ಕೇವಲ ಬೌದ್ಧಿಕ ವಿಕಾಸ ಮಾತ್ರ ಸಾಧ್ಯ ಎಂದವರು ವಿಶ್ಲೇಷಿಸಿದರು.

ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ತಾಲ್ಲೂಕು ಕ.ಸಾ.ಪ. ಅಧ್ಯಕ್ಷ ಬಿ. ವಾಮದೇವಪ್ಪ, ಹಿರಿಯ ಪತ್ರಕರ್ತ ಹಳೇಬೀಡು ರಾಮಪ್ರಸಾದ್, ಸಿದ್ದಗಂಗಾ ವಿದ್ಯಾಸಂಸ್ಥೆ ಮುಖ್ಯಸ್ಥೆ ಜಸ್ಟಿನ್ ಡಿಸೋಜ, ಕಲಾಕುಂಚದ ಅಧ್ಯಕ್ಷ ಕೆ.ಹೆಚ್. ಮಂಜುನಾಥ್ ಉಪಸ್ಥಿತರಿದ್ದರು.

ಬೇಳೂರು ಸಂತೋಷ ಕುಮಾರ ಶೆಟ್ಟಿ ಸ್ವಾಗತಿಸಿದರೆ. ಕಲಾಕುಂಚ ಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ನಿರೂಪಿಸಿದರು.

## ಜಗಳೂರಿನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ



ಜಗಳೂರು, ಅ.31- ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಸರಳವಾಗಿ ಆಚರಣೆ ಮಾಡಲಾಯಿತು. ಅಧಿಕಾರಿ ವರ್ಗ, ಸಮಾಜದ ಮುಖಂಡರು ಹಾಗೂ ಹೋರಾಟಗಾರರು ಭಾಗವಹಿಸಿ, ಪೂಜೆ ಸಲ್ಲಿಸಿದರು. ನಂತರ ಸಿಹಿ ಹಂಚಿ ಸಂಭ್ರಮಿಸಿದರು.

ಪಟ್ಟಣದ ವಾಲ್ಮೀಕಿ ಭವನದ ಆವರಣದಲ್ಲಿ ಇಂದು ತಾಲ್ಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಲ್ಲೂಕು ನಾಯಕ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿಯ ಅಂಗವಾಗಿ ವಾಲ್ಮೀಕಿ ಅವರ ಕಂಚಿನ ಪುತ್ಥಳಿಗೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಡಾ.ನಾಗವೇಣಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಹೇಶ್ವರಪ್ಪ, ನಾಯಕ ಸಮಾಜದ ಕಾರ್ಯ ದರ್ಶಿ ಸೂರಲಿಂಗಪ್ಪ, ಮಾಜಿ ಕಾರ್ಯದರ್ಶಿ ಬಿ. ಲೋಕೇಶ್, ಮುಖಂಡರಾದ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಬಿಳಿಚೋಡು ಮಹೇಶ್, ಜಿ.ಪಂ ಸದಸ್ಯೆ ಸವಿತಾ, ತಾ.ಪಂ ಸದಸ್ಯರಾದ ಟಿ. ಬಸವರಾಜ್, ಶಂಕರ್‌ನಾಯ್ಕ, ಪ.ಪಂ ಸದಸ್ಯ ಆರ್. ತಿಪ್ಪೇಸ್ವಾಮಿ, ಪಾಪಲಿಂಗಪ್ಪ, ಮುಖಂಡರಾದ ಪಾಲನಾಯಕನ ಕೋಟೆ ಓಬಣ್ಣ, ಎ.ಪಿ ಪಾಲಯ್ಯ, ಸಿಪಿಐ ಡಿ. ದುರುಗಪ್ಪ, ಬಿಇಓ ವೆಂಕಟೇಶ್ ಇದ್ದರು.

## ಕಾಂಗ್ರೆಸ್ ಜೊತೆ ಎಡರಂಗದ ಮೈತ್ರಿ

ನವದೆಹಲಿ, ಅ. 31 – ಪಶ್ಚಿಮ ಬಂಗಾಳದ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಳ್ಳಲು ಸಿಪಿಐ (ಎಂ) ಕೇಂದ್ರೀಯ ಸಮಿತಿ ಒಪ್ಪಿಗೆ ನೀಡಿದೆ.

2021ರ ಪಶ್ಚಿಮ ಬಂಗಾಳದ ಚುನಾವಣೆಯಷ್ಟೇ ಅಲ್ಲದೇ, ತಮಿಳುನಾಡು, ಕೇರಳ, ಅಸ್ಸಾಂಗಳಲ್ಲಿಯೂ ಸೆಕ್ಯುಲರ್ ಪಕ್ಷ ಗಳ ಜೊತೆ ಮೈತ್ರಿ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಪಶ್ಚಿಮ ಬಂಗಾಳ ದಲ್ಲಿ ಬಿಜೆಪಿ, ಟಿ.ಎಂ.ಸಿ. ಸೋಲಿ ಸುವ ಸಲುವಾಗಿ ಸಿಪಿಐ (ಎಂ) ಹಾಗೂ ಎಡರಂಗಗಳು ಕಾಂಗ್ರೆಸ್ ಸೇರಿದಂತೆ ಎಲ್ಲ ಸೆಕ್ಯುಲರ್ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಳ್ಳಲಿವೆ ಎಂದು ಎಡಪಕ್ಷದ ಮುಖಂಡ ಸೀತಾರಾಮ್ ಯೆಚೂರಿ ತಿಳಿಸಿದ್ದಾರೆ.


|| ಶ್ರೀ ಗುರು ಸಿದ್ಧರಾಮೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

**ಶ್ರೀಮತಿ ರಾಜೇಶ್ವರಿ ಜಯಣ್ಣ ಮತ್ತು ಮಕ್ಕಳು**

ಪಿ.ಜೆ. ಬಡಾವಣೆ, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.

ಶರಣ ಬಂಧುಗಳೇ, ದಿನಾಂಕ 22-10-2020 ನೇ ಗುರುವಾರ ಸಂಜೆ 5.00 ಗಂಟೆಗೆ ನಮ್ಮ ಮಗ



ಜನನ : 30-09-1967

ಲಿಂಗೈಕ್ಯ : 22-10-2020

**ಶರಣ ಸಂದೀಪ್ ಎ.ಜೆ.**

ಇವರು ಲಿಂಗೈಕ್ಯರಾದ ಪ್ರಯುಕ್ತ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 01-11-2020 ರ ಭಾನುವಾರ ಬೆಳಿಗ್ಗೆ 11.30 ಗಂಟೆಗೆ ಡಾ. ಷ.ಬ್ರ. ಸದ್ಯೋಜಾತ ಮಹಾಸ್ವಾಮಿಗಳವರ ನಿಕೇತನ, ಎಂ.ಸಿ.ಸಿ 'ಎ' ಬ್ಲಾಕ್, ವಾಟರ್ ಟ್ಯಾಂಕ್ ಪಕ್ಕ, ದಾವಣಗೆರೆಯಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ✦ ಶ್ರೀಮತಿ ರಾಜೇಶ್ವರಿ ಎ.ಸಿ ಜಯಣ್ಣ
✦ ಶ್ರೀಮತಿ ಶ್ರೀ ಎ.ಸಿ. ಚಂದ್ರಣ್ಣನವರು ಮತ್ತು ಮಕ್ಕಳು, ಬೆಂಗಳೂರು.
✦ ಧರ್ಮಪತ್ನಿ ಶ್ರೀಮತಿ ಸಪ್ನ ಎ.ಜೆ. ಸಂದೀಪ್
✦ ಮಗಳು : ಕು. ಶಾಂಭವಿ ಎಸ್.ಎಸ್. ✦ ಮಗ : ಚಿ. ಸಮಾಹಿತ್ ಎಸ್.ಎಸ್.
✦ ಶ್ರೀಮತಿ ಎ.ಜೆ. ಲತಾ ಮತ್ತು ಡಾ|| ಎಂ. ಚಂದ್ರಶೇಖರ ಮತ್ತು ಮಕ್ಕಳು
✦ ಶ್ರೀಮತಿ ಡಾ|| ಎ.ಜೆ. ಸ್ಮಿತ ಮತ್ತು ಡಾ ಪಿ.ಎಸ್. ಬಾಲು ಮತ್ತು ಮಕ್ಕಳು
✦ ಶ್ರೀಮತಿ ಡಾ. ಎ.ಜೆ. ನೀತಾ ಮತ್ತು ಡಾ. ಬಿ.ಇ. ರಂಗಸ್ವಾಮಿ ಮತ್ತು ಮಕ್ಕಳು
✦ ಶ್ರೀಮತಿ ಬಸಮ್ಮ ಬಸವಲಿಂಗಪ್ಪ ಮತ್ತು ಮಕ್ಕಳು, ಬೆಳ್ಳೂಡಿ
ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು.


## ಜಿ. ಸೋಮಶೇಖರಪ್ಪ ನಿಧನ



ದಾವಣಗೆರೆ ನಗರದ ತೆಲಗಿ ಗುರುಸಿದ್ದಪ್ಪ (ಎಲಿಗಾರ್) ಅವರ ಮಗ ಕರ್ನಾಟಕ ಅಮೆಚೂರ್ ರೋವಿಂಗ್ ಅಸೋಸಿಯೇಷನ್‌ನ ಕಾರ್ಯದರ್ಶಿ ಜಿ. ಸೋಮಶೇಖರಪ್ಪ (Ex Chief Secretary Of Karnataka Olympic Association, Ex Vice President Of Indian Olympic Association)ಇವರು ದಿನಾಂಕ 31.10.2020ರ ಶನಿವಾರ ನಿಧನರಾಗಿರುತ್ತಾರೆ. ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಸಹೋದರ, ಸಹೋದರಿ, ನಗರದ ಎಲಿಗಾರ್ ಹಾಗೂ ಕಲಪನಹಳ್ಳಿ ಗೌಡರ ವಂಶಸ್ಥರನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 1.11.2020ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನಲ್ಲಿ ನೆರವೇರಲಿದೆ.

## ಕೆರೆಯಾಗಳ ಹಳ್ಳಿ ಕರಿಯಮ್ಮ ನಿಧನ



ದಾವಣಗೆರೆ ತಾಲ್ಲೂಕು ಆವರಗೆರೆ ಗ್ರಾಮದ ವಾಸಿ ಕೆರೆಯಾಗಳ ಹಳ್ಳಿ ಕರಿಯಮ್ಮ (80) ಅವರು ದಿನಾಂಕ 31.10.2020 ರಂದು ಶನಿವಾರ ಸಂಜೆ 6 ಗಂಟೆಗೆ ನಿಧನರಾಗಿದ್ದಾರೆ. ಮಕ್ಕಳು ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.11.2020 ರಂದು ಭಾನುವಾರ ಮಧ್ಯಾಹ್ನ 12 ಗಂಟೆಗೆ ಆವರಗೆರೆ ರುದ್ರಭೂಮಿಯಲ್ಲಿ ನೆರವೇರಲಿದೆ.

## ಎಸ್. ಗಂಗಾಧರಪ್ಪ ನಿಧನ



ದಾವಣಗೆರೆ ತಾ|| ದೊಡ್ಡಬಾತಿ ಗ್ರಾಮದ ವಾಸಿ **ಎಸ್. ಗಂಗಾಧರಪ್ಪ** (62) (ಕಂಡಕ್ಟರ್ ರಾಜಣ್ಣ) ಇವರು ದಿನಾಂಕ 31.10.2020 ರ ಶನಿವಾರದಂದು ಬೆಳಿಗ್ಗೆ 9.30 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು 01.11.2020 ರ ಭಾನುವಾರ ಬೆಳಿಗ್ಗೆ 9.00 ಗಂಟೆಗೆ ದೊಡ್ಡಬಾತಿ ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

## ಮಲೇಬೆನ್ನೂರಿನಲ್ಲಿ ಇಂದು ದೊಡ್ಡ ಎಡೆ ಪೂಜೆ



ಶ್ರೀ ಬೀರಲಿಂಗೇಶ್ವರ ದೇವಸ್ಥಾನ ದಲ್ಲಿ ವಿಜಯದಶಮಿ ಹಾಗೂ ಮರಿ ಬನ್ನಿ ಅಂಗವಾಗಿ ಇಂದು ಬೆಳಿಗ್ಗೆ 8.30 ರಿಂದ 9.30 ರವರೆಗೆ ಜವಳ, ಬಾಯಿ ಬೀಗ, ಹರಕೆ, ಕಾಣಿಕೆಗಳನ್ನು ಸಲ್ಲಿಸುವ ಕಾರ್ಯಕ್ರಮಗಳ ನಂತರ, ಬೆಳಿಗ್ಗೆ 10 ಗಂಟೆಗೆ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ಹಾಗೂ ಈರಗಾರರ ಸಮ್ಮುಖದಲ್ಲಿ ಸ್ವಾಮಿಯ ದೊಡ್ಡ ಎಡೆಪೂಜೆ ನೆರವೇರಲಿದೆ. ನಂತರ ಮಹಾಪ್ರಸಾದ ವಿನಿಯೋಗ ಇರುತ್ತದೆ ಎಂದು ಕೆ.ಪಿ. ಗಂಗಾಧರ್ ತಿಳಿಸಿದ್ದಾರೆ.

**ರಾಶಿ ಪೂಜೆ :** ಮರಿಬನ್ನಿ ಜಾತ್ರೆ ಅಂಗವಾಗಿ ಶನಿವಾರ ದೇವಸ್ಥಾನದಲ್ಲಿ ರಾಶಿ ಪೂಜೆ ನೆರವೇರಿಸಿ, ಭಾನುವಾರ ದೊಡ್ಡ ಎಡೆ ಪೂಜೆಯ ಮಹಾದಾಸೋಹದ ಸಿದ್ಧತೆಗೆ ಚಾಲನೆ ನೀಡಲಾಯಿತು.


|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಜಿಲ್ಲೆ, ತಾಲ್ಲೂಕು, ಲಿಂಗದಹಳ್ಳಿ ಗ್ರಾಮದ ವಾಸಿ

**ಶ್ರೀ ಜಿ. ಉಮಾಪತಿಯಪ್ಪ ಮತ್ತು ಸಹೋದರರು ಹಾಗೂ ಮಕ್ಕಳು**

ಮಾಡುವ ವಿಜ್ಞಾಪನೆಗಳು.

ದಿನಾಂಕ : 25.10.2020ನೇ ಭಾನುವಾರ ಬೆಳಗಿನ ಜಾವ 12.10 ಗಂಟೆಗೆ ನನ್ನ ಸಹೋದರನಾದ

ಲಿಂ|| ಶ್ರೀ ಜಿ. ಸಿದ್ದಪ್ಪನವರ ಮಗ

**ಶರಣ ಜಿ.ಎಸ್. ವೀರಣ್ಣನವರು**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ : 02.11.2020ನೇ ಸೋಮವಾರ ಬೆಳಿಗ್ಗೆ 10.00 ಗಂಟೆಗೆ, ಲಿಂಗದಹಳ್ಳಿ ಗ್ರಾಮದ ಲಿಂಗೈಕ್ಯರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಮೃತರ ಪತ್ನಿ : ಶ್ರೀಮತಿ ವಸಂತಮ್ಮ ಮತ್ತು ಮಕ್ಕಳು
ಶ್ರೀ ಜಿ.ಎಸ್. ನಾಗರಾಜ್ ಶ್ರೀಮತಿ ಲತಾ ಮತ್ತು ಮಕ್ಕಳು
ಶ್ರೀಮತಿ ಜಿ.ಎಸ್. ರೂಪಾ ದಿ|| ಶ್ರೀ ಪಂಚಾಕ್ಷರಪ್ಪ, ಹಲಸಬಾಳು. ಹಾಗೂ ಅಳಿಯಂದಿರು,
ಮೊಮ್ಮಕ್ಕಳು ಮತ್ತು ಗೌಡ್ರ ವಂಶಸ್ಥರು, ಲಿಂಗದಹಳ್ಳಿ ಹಾಗೂ ಬಂಧು-ಮಿತ್ರರು
ಫೋನ್ : 99014 57244, 99016 39499

## ಕನ್ನಡವೇ ನನ್ನ ಉಸಿರು

ಕನ್ನಡವೇ ನನ್ನುಸಿರು
ಕನ್ನಡವೇ ಹಚ್ಚ ಹಸಿರು
ಕನ್ನಡವೇ ಜೇನಿನಷ್ಟು ಸಿಹಿ
ಕನ್ನಡವೇ ನನ್ನ ನಿತ್ಯ ಪಠಣ

ಭುವನೇಶ್ವರಿ ತಾಯ್ನಾಡು
ಸುಂದರ ಬೇಲೂರು ಹಳೇಬೀಡು
ಶ್ರೀಗಂಧದ ಸಹ್ಯಾದ್ರಿಯ ನಾಡು
ಬಾದಾಮಿ ಐಹೊಳೆಯ ಸಿರಿನಾಡು

ದಾಸರು ಪೂರೈಸಿದ ನಾಡಿದು
ಕುವೆಂಪು-ಬೇಂದ್ರೆ ಹರಸಿದ ನಾಡಿದು
ಕೈಲಾಸಂರ ಕೈಲಾಸ ಮಾಸ್ತಿಯೇ ಇಲ್ಲಿಯ ಆಸ್ತಿ
ಇದು ಜ್ಞಾನದ ಪೀಠ ಇಲ್ಲಿ ಸುಳ್ಳು ಕಪಟದಾ ನಾಸ್ತಿ

ಸ್ವರ್ಗದ ಸೀಮೆ ಕರುನಾಡು
ಎಂದೂ ಕೆಂಪು-ಹಳದಿ ಬಾವುಟ ಹಾರಾಟ
ಚಾಮುಂಡಿಯೇ ನಮಗೆ ಶ್ರೀರಕ್ಷೆ ಶೃಂಗೇರಿ
ಶಾರದೆಯ ಇಲ್ಲಿಯ ಕಕ್ಷೆ

ಭೈರಪ್ಪ, ಕಾರಂತರು ಕನ್ನಡಕ್ಕೆ ಹೆಮ್ಮೆ
ಬೀಚಿ, ಕಂಬಾರರು ಕನ್ನಡದ ಹಿರಿಮೆ
ಕವಿಗಳ ರಸಋಷಿಗಳ ತವರು
ರನ್ನ ಪಂಪರ ಸಿರಿಯ ಬೇರು

ದೇವಾಲಯವೇ ಕನ್ನಡನಾಡು
ತನು-ಮನ ಇದಕ್ಕೆ ಮುಡುಪಾಗಿಡು
ಕೋಲಾರದ ಚಿನ್ನದ ನಾಡು
ಕೊಡಗು ಹಂಪೆಯ ಚರಿತೆ ಹಾಡು

ಚೆನ್ನವ್ವ ಓಬವ್ವರ ಕೆಚ್ಚೆದೆಯ ಬಾಗಿಲು
ಪುಣ್ಯಭೂಮಿ ಈ ದೇಗುಲವು
ಮೈಸೂರ ಮಲ್ಲಿಗೆ ಮುಡಿಯೋಣ ಬನ್ನಿ
ಕೃಷ್ಣರಾಜ ಸಾಗರದ ಸವಿ ಸವಿಯೋಣ ಬನ್ನಿ

ಕನ್ನಡ ತಂಪೆರೆಯುತ್ತೆ ಮನಕೆ
ಕನ್ನಡಕ್ಕಾಗಿ ಕೈ ಎತ್ತಿ ಋಣ ತೀರಿಸುವ ಕರ್ನಾಟಕಕ್ಕೆ
ಕನ್ನಡಕ್ಕೆ ಬಾರದಂತೆ ನೋಡಿಕೋ ಆಪತ್ತು
ಎಲ್ಲರೂ ಹೋರಾಡಬೇಕು ಬರದಂತೆ ವಿಪತ್ತು.

**- ಕೋಮಲ ವಸಂತ್ ಕುಮಾರ್**, ದಾವಣಗೆರೆ.

## ಬೆಂಗಳೂರು - ಮೈಸೂರು ರೈಲ್ವೆ ಮಾರ್ಗ ಹಿತಕರ



### ನೀರಿನ ಲೋಟದ ಸಾಕ್ಷಿ ನೀಡಿದ ಸಚಿವ ಗೋಯಲ್

ಬೆಂಗಳೂರು, ಅ. 31 – ಬೆಂಗಳೂರು ಹಾಗೂ ಮೈಸೂರು ನಡುವಿನ ರೈಲ್ವೆ ಪ್ರಯಾಣ ಎಷ್ಟು ಆರಾಮದಾಯಕವಾಗಿದೆ ಎಂದರೆ, ರೈಲಿನ ಬೋಗಿಯಲ್ಲಿ ಇರಿಸಿದ್ದ ಗಾಜಿನ ಲೋಟದಿಂದ ಒಂದೇ ಒಂದು ಹನಿ ನೀರು ಹೊರ ಚೆಲ್ಲಿಲ್ಲ ಎಂದು ರೈಲ್ವೆ ಸಚಿವ ಪಿಯೂಶ್ ಗೋಯಲ್ ಹೇಳಿದ್ದಾರೆ.

ಈ ಬಗ್ಗೆ ವಿಡಿಯೋ ಒಂದನ್ನು ಟ್ವೀಟ್ ಮಾಡಿರುವ ಸಚಿವರು, ಬೋಗಿಯ ಟೇಬಲ್ ಮೇಲೆ ಇರಿಸಿರುವ ನೀರಿನ ಲೋಟ ಇರುವ ದೃಶ್ಯ ಹಂಚಿಕೊಂಡಿದ್ದಾರೆ.

ಪ್ರಯಾಣ ಎಷ್ಟು ಹಿತಕರವಾಗಿದೆ ಎಂದರೆ, ರೈಲು ವೇಗವಾಗಿ ಸಾಗಿದರೂ ಒಂದೇ ಒಂದು ಹನಿ ನೀರು ಚೆಲ್ಲಿಲ್ಲ. ಬೆಂಗಳೂರು - ಮೈಸೂರು ನಡು ವಿನ ರೈಲ್ವೆ ಟ್ರ್ಯಾಕ್ ಅನ್ನು ಅತ್ಯುತ್ತಮವಾಗಿ ನಿರ್ವಹಿಸಿರುವುದು ಇದಕ್ಕೆ ಕಾರಣ ಎಂದಿದ್ದಾರೆ. ಕಳೆದ ಆರು ತಿಂಗಳಲ್ಲಿ 40 ಕೋಟಿ ರೂ. ವೆಚ್ಚದಲ್ಲಿ 130 ಕಿ.ಮೀ. ಮಾರ್ಗದ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಸಮುದಾಯದ ಕಟ್ಟಕಡೆಯ ವ್ಯಕ್ತಿಗೂ ಮೀಸಲಾತಿ ಸೌಲಭ್ಯ ಸಿಗುವಂತಾದಾಗ ಸಮಾಜದ ಅಭಿವೃದ್ಧಿ ಸಾಧ್ಯ

### ಹರಪನಹಳ್ಳಿ : ವಾಲ್ಮೀಕಿ ಜಯಂತ್ಯೋತ್ಸವದಲ್ಲಿ ಉಪವಿಭಾಗಾಧಿಕಾರಿ ಪ್ರಸನ್ನಕುಮಾರ್ ಅಭಿಮತ

ಹರಪನಹಳ್ಳಿ, ಅ.31- ಮೀಸಲಾತಿ ಸೌಲಭ್ಯಗಳು ಕೇವಲ ಉಳ್ಳವರ ಪಾಲಾಗದೇ ಸಮುದಾಯದ ಕಟ್ಟಕಡೆಯ ವ್ಯಕ್ತಿಗೂ ಸಿಗುವಂತಾದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ತಾಲ್ಲೂಕು ಉಪವಿಭಾಗಾಧಿಕಾರಿ ವಿ.ಕೆ. ಪ್ರಸನ್ನಕುಮಾರ್ ಹೇಳಿದರು.

ತಾಲ್ಲೂಕು ಆಡಳಿತದ ವತಿಯಿಂದ ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ಇಂದು ಏರ್ಪಡಿಸಲಾಗಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಬಳಿಕ ಅವರು ಮಾತನಾಡಿದರು.



ಮೀಸಲಾತಿಯ ಸೌಲಭ್ಯಗಳು ಪದೇ ಪದೇ ಉಳ್ಳವರ ಪಾಲಾಗದೇ ಸಮುದಾಯದ ಕಟ್ಟಕಡೆಯ ವ್ಯಕ್ತಿಗೂ ಸಿಕ್ಕಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ. ಮಹರ್ಷಿ ವಾಲ್ಮೀಕಿ ಕೇವಲ ಒಂದು ಜನಾಂಗಕ್ಕೆ ಸೀಮಿತವಲ್ಲ. ಅವರು ವಿಶ್ವ ಮಾನವರು, ಅವರ ಆದರ್ಶಗಳು ಸರ್ವ ಜನಾಂಗಕ್ಕೂ ಮಾದರಿಯಾಗಿವೆ ಎಂದರು.

ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಮಾತನಾಡಿ, ರಾಮನನ್ನು ಪರಿಚಯಿಸಿದ ಮಹರ್ಷಿ ವಾಲ್ಮೀಕಿಯನ್ನು ಮರೆಯದೇ ರಾಮ ಮಂದಿರದ ಜೊತೆಗೆ ಮಹರ್ಷಿ ವಾಲ್ಮೀಕಿಯ ಮಂದಿರವೂ ನಿರ್ಮಾಣ ಮಾಡಬೇಕು. ಸೂರ್ಯ-ಚಂದ್ರರಿರುವವರೆಗೂ ಮಹರ್ಷಿ ವಾಲ್ಮೀಕಿ ವಿರಚಿತ ರಾಮಾಯಣದ ಆದರ್ಶಗಳು ಶಾಶ್ವತ. ನಮ್ಮ ಸಮಾಜದ ನ್ಯಾಯ ಸಮ್ಮತ ಬೇಡಿಕೆ ಶೇ. 7.5ರ ಮೀಸಲಾತಿ ಹೆಚ್ಚಳ ಕುರಿತು ಮೀನಾಮೇಷ ಎಣಿಸುತ್ತಿರುವ ರಾಜ್ಯ ಸರ್ಕಾರದ ನಡೆ ಖಂಡನೀಯ. ಕೂಡಲೇ ರಾಜ್ಯ ಸರ್ಕಾರ ಎಚ್ಚೆತ್ತು ನಮ್ಮ ನ್ಯಾಯಸಮ್ಮತ ಬೇಡಿಕೆಯನ್ನು ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಡಿ.ವೈ.ಎಸ್.ಪಿ. ಮಲ್ಲೇಶ್ ದೊಡ್ಮನಿ ಮಾತನಾಡಿ, ನಾವೆಲ್ಲರೂ ತೋರಿಕೆಗೆ ಮಾತ್ರ ಮಹರ್ಷಿ ವಾಲ್ಮೀಕಿಯಂತೆ ಇದ್ದೇವೆ. ಆದರೆ, ಅಂತರಾತ್ಮದಲ್ಲಿ ನಮ್ಮಲ್ಲಿ ಬೇಡನ ಕ್ರೌರ್ಯ ಇನ್ನೂ ಇದೆ. ಹಾಗಾಗಿ ನಾವೆಲ್ಲರೂ ಬದಲಾಗಿ ನಮ್ಮಲ್ಲಿರುವ ಬೇಡನ ಕ್ರೌರ್ಯವನ್ನು ಸುಟ್ಟುಹಾಕಿ ವಾಲ್ಮೀಕಿಯ ಆದರ್ಶ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು.ಬದಲಾವಣೆಯಿಂದಲೇ ಮಹರ್ಷಿ ವಾಲ್ಮೀಕಿ ಅವರು ರಾಮಾಯಣದಂತಹ ಮಹಾನ್ ಗ್ರಂಥವನ್ನು ಜಗತ್ತಿಗೆ ನೀಡಲು ಸಾಧ್ಯವಾಯಿತು ಎಂದರು.

ತಹಶೀಲ್ದಾರ್ ಅನಿಲ್ ಕುಮಾರ್ ಮಾತನಾಡಿ, ಮಹನೀಯರ ಜಯಂತಿಯನ್ನು ಕೇವಲ ಫೋಟೋ ಇಟ್ಟುಕೊಂಡು, ಡಿಜಿ ಹಾಕಿ ರಸ್ತೆಯಲ್ಲಿ ಮೆರವಣಿಗೆ ಮಾಡಿಕೊಂಡು ಕುಣಿಯುವುದಕ್ಕಿಂತ ಅವರ ಆದರ್ಶಗಳನ್ನು ಅಳವಡಿಸಿಕೊಂಡು ಜೀವಿಸಿದರೆ ಸಾಕು ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದರು.

ಮಡಿವಾಳ ಸಮಾಜದ ಜಿಲ್ಲಾ ಅಧ್ಯಕ್ಷ ಯರಬಳ್ಳಿ ಉಮಾಪತಿ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಆನಂದ ವೈ. ಡೊಳ್ಳಿನ, ಶಿಕ್ಷಣ ಸಂಯೋಜಕ ಗಿರಜ್ಜಿ ಮಂಜುನಾಥ್, ಮಾತನಾಡಿದರು.

ವಾಲ್ಮೀಕಿ ನಾಯಕ ಸಮಾಜದ ಕಾರ್ಯದರ್ಶಿ ತೆಲಿಗಿ ಗಿರಜ್ಜಿ ನಾಗರಾಜ್, ಸಂಘಟನಾ ಕಾರ್ಯದರ್ಶಿ ಮಾಳ್ಗಿ ತಿಮ್ಮೇಶ್, ಜಿ.ಕೆ. ಬಸವರಾಜ್, ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಎಸ್. ದಂಡ್ಯೆಪ್ಪ, ಪಿಎಸ್ಐ ಸಿ.ಪ್ರಕಾಶ್, ಉಪನೋಂದಣಿ ಅಧಿಕಾರಿ ದೀಪಾ ಮ್ಯಾಳಿ, ಜಿಲ್ಲಾ ಬಿಜೆಪಿ ಎಸ್ಟಿ ಮೋರ್ಚಾ ಕಾರ್ಯದರ್ಶಿ ಆರ್.ಲೋಕೇಶ್, ತಾಲ್ಲೂಕು ಬಿಜೆಪಿ ಎಸ್ಟಿ ಮೋರ್ಚಾ ಅಧ್ಯಕ್ಷ ನೀಲಗುಂದ ಟಿ.ಮನೋಜ್, ಜಿ.ಪಂ. ಸದಸ್ಯ ಡಿ.ಸಿದ್ದಪ್ಪ, ತಾ.ಪಂ. ಸದಸ್ಯ ಯಲ್ಲಜ್ಜಿ ಬಸಪ್ಪ, ಅರುಣ್ ಪೂಜಾರ್, ನಿಲಯ ಪಾಲಕರಾದ ದೇವೇಂದ್ರಪ್ಪ, ಸಿ.ರಾಘವೇಂದ್ರ, ಎನ್.ಜಿ. ಬಸವರಾಜ್, ಕೆ.ಸುನೀತ, ಡಿ.ಯಾಸ್ಮೀನ್ ಬಾನು, ಯಲ್ಲಮ್ಮ, ತಾಲ್ಲೂಕು ವಾಲ್ಮೀಕಿ ಸಮಾಜದ ಪದಾಧಿಕಾರಿಗಳಾದ ದ್ಯಾಪನಾಯಕನಹಳ್ಳಿ ಜಿ. ಬಸವರಾಜ್, ಒಡ್ಡಿನದಾದಾಪುರದ ಟಿ. ಶಿವಾನಂದ್, ಟಿ.ಯೋಗೀಶ್, ನಂದಿಬೇವೂರು ರಾಜಪ್ಪ, ಹರಿಯಮ್ಮನಹಳ್ಳಿ ಮಂಜುನಾಥ್, ಮಹಿಳಾ ಸಂಘಟನೆಯ ಕಂಚಿಕೇರಿ ವಿಜಯಲಕ್ಷ್ಮಿ, ಹೆಚ್.ಎ.ಶಾಲಿನಿ, ಟಿ.ಪದ್ಮಾವತಿ, ಮಂಜುಳ, ಹನುಮಕ್ಕ, ಪವಿತ್ರ, ಪೊಲೀಸ್ ಸಿಬ್ಬಂದಿ ಎಂ.ಮಲ್ಲೇಶ್‌ನಾಯ್ಕ, ಏಕಲವ್ಯ ಸಂಘರ್ಷ ಸಮಿತಿಯ ಅಧ್ಯಕ್ಷ ರಾಯದುರ್ಗದ ಪ್ರಕಾಶ್, ಶಿವರಾಜ, ಬಾಣದ ಅಂಜಿನಿ ಸೇರಿದಂತೆ ಮತ್ತಿತರರು ಇದ್ದರು.

## ಹಳೆ ಭಾಗದ ಸಮಸ್ಯೆಗೆ ಸ್ಪಂದಿಸದ ಪಾಲಿಕೆ ಆಯುಕ್ತರು: ಜನಶಕ್ತಿ ಆರೋಪ

ದಾವಣಗೆರೆ, ಅ. 31- ನಗರದ ಹಳೇ ಭಾಗದಲ್ಲಿ ಮೂಲ ಸೌಕರ್ಯದ ಕೊರತೆ ಇದ್ದು, ಈ ಬಗ್ಗೆ ಮನವಿ ಸಲ್ಲಿಸಿದ್ದರೂ ಮಹಾನಗರ ಪಾಲಿಕೆಯ ಆಯುಕ್ತರು ಸ್ಪಂದಿಸುತ್ತಿಲ್ಲ ಎಂದು ಕರ್ನಾಟಕ ಜನ ಶಕ್ತಿ ಜಿಲ್ಲಾ ಸಂಚಾಲಕ ಸತೀಶ್ ಅರವಿಂದ್ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಖ್ತರ್ ರಜಾ ವೃತ್ತದಿಂದ ಆರ್‌ಟಿಓ ಕಚೇರಿ ವರೆಗೆ ರಸ್ತೆ ಸಂಪೂರ್ಣ ಹಾಳಾಗಿದೆ. ಈ ಬಗ್ಗೆ ಪ್ರಶ್ನಿಸಿದರೆ ಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ ಅಧಿಕಾರಿಗಳು ಒಬ್ಬರ ಮೇಲೊಬ್ಬರು ಬೆರಳು ತೋರಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ವಾರ್ಡ್ ಕಮಿಟಿ ರಚಿಸಿ ಮೂರು ತಿಂಗಳಿಗೊಮ್ಮೆ ಸಾರ್ವಜನಿಕ ಸಭೆ ನಡೆಸಬೇಕು ಎಂದು ಒತ್ತಾಯಿಸಿದರು.

ವಾರ್ಡುಗಳಲ್ಲಿ ಚರಂಡಿ, ಕುಡಿಯುವ ನೀರು, ರಸ್ತೆ, ಸ್ವಚ್ಛತೆ, ಬೀದಿ ದೀಪ ಸೇರಿದಂತೆ ಮೂಲ ಸೌಲಭ್ಯಗಳ ಕೊರತೆ ಬಗ್ಗೆ ಪಟ್ಟಿ ಮಾಡಿ ಸದಸ್ಯರಿಗೆ ತಿಳಿಸಲಾಗುವುದು. ಸದಸ್ಯರು ಸ್ಪಂದಿಸದಿದ್ದರೆ ಅವರ ಮನೆ ಮುಂದೆ ಧರಣಿ ನಡೆಸಲಾಗುವುದು ಎಂದು ಆಮ್ ಆದ್ಮಿ ಪಾರ್ಟಿಯ ಎಸ್.ಕೆ. ಆದಿಲ್ ಖಾನ್ ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಸೋಷಿಯಲ್ ಸರ್ವೀಸ್ ಅಧ್ಯಕ್ಷ ಮಹ್ಮದ್ ಹಯಾತ್, ಟಿಪ್ಪು ಟ್ರಸ್ಟ್ ಮುಖಂಡ ಮಹಬೂಬ್ ಭಾಷ, ಜನಶಕ್ತಿ ಅಣ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಮೊದಲ ಜೇಮ್ಸ್ ಬಾಂಡ್ ನಟ ಸಿಯಾನ್ ಕಾನೆರಿ ವಿಧಿವಶ

ಲಂಡನ್, ಅ. 31 – ಮೊದಲ ಜೇಮ್ಸ್ ಬಾಂಡ್ ನಟನಾಗಿ ವಿಶ್ವದಾದ್ಯಂತ ಖ್ಯಾತಿ ಗಳಿಸಿದ್ದ ಸ್ಕಾಟಿಷ್ ನಟ ಸಿಯಾನ್ ಕಾನೆರಿ 90ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದಿದ್ದಾರೆ.

ಬಹಮಾಸ್‌ನಲ್ಲಿ ನಿದ್ರೆಯಲ್ಲಿರುವಾಗ ಅವರು ಕೊನೆಯುಸಿರೆಳೆದಿದ್ದಾರೆ. ಕಳೆದ ಕೆಲ ದಿನಗಳಿಂದ ಅವರು ಅಸ್ವಸ್ಥರಾಗಿದ್ದರು ಎಂದು ಬಿ.ಬಿ.ಸಿ. ವರದಿ ಮಾಡಿದೆ.

ಐದು ದಶಕಗಳ ಕಾಲ ನಟರಾಗಿದ್ದ ಕಾನೆರಿ, ಬಾಂಡ್ ಚಿತ್ರಗಳಷ್ಟೇ ಅಲ್ಲದೇ 'ದಿ ಹಂಟ್ ಫಾರ್ ರೆಡ್ ಅಕ್ಟೋಬರ್', 'ಇಂಡಿಯಾನಾ ಜೋನ್ಸ್ ಅಂಡ್ ದಿ ಲಾಸ್ಟ್ ಕ್ರುಸೇಡ್', 'ಮರ್ಡರ್ ಆನ್ ದಿ ಓರಿಯಂಟ್ ಎಕ್ಸ್‌ಪ್ರೆಸ್' ಹಾಗೂ 'ದಿ ರಾಕ್' ಚಿತ್ರಗಳ ಮೂಲಕವೂ ಹೆಸರು ಮಾಡಿದ್ದಾರೆ.

ಆಗಸ್ಟ್ 25, 1930ರಂದು ಜನಿಸಿದ್ದ ಅವರು, 13ನೇ ವಯಸ್ಸಿನಲ್ಲಿ ಯಾವುದೇ ವಿದ್ಯಾರ್ಹತೆ ಇಲ್ಲದೇ ಸಣ್ಣ ಪುಟ್ಟ ಕೆಲಸಗಳಲ್ಲಿ ತೊಡಗಿದ್ದರು. ನಂತರ ರಾಯಲ್ ನೇವಿಗೆ ಸೇರಿದ್ದರಾದರೂ, ಅನಾರೋಗ್ಯದ ಕಾರಣದಿಂದಾಗಿ ಸೇವೆಯಿಂದ ಅನರ್ಹಗೊಂಡಿದ್ದರು.



ಆನಂತರದಲ್ಲಿ ಎಡಿನ್‌ಬರ್ಗ್ ಆರ್ಟ್ ಕಾಲೇಜ್‌ನಲ್ಲಿ ಮಾಡೆಲ್ ಆಗಿದ್ದರು.

1956ರಲ್ಲಿ ಅವರು 'ರೆಕ್ವೀಮ್ ಫಾರ್ ಎ ಹೆವಿವೇಟ್' ಚಿತ್ರದಲ್ಲಿ ಮೊದಲ ಬಾರಿ ನಟಿಸಿದ್ದರು. ನಂತರ 1962ರಲ್ಲಿ 'ಡಾ. ನೋ' ಚಿತ್ರದ ಮೂಲಕ ಅವರು ಜೇಮ್ಸ್ ಬಾಂಡ್ ಆಗಿದ್ದರು. ಅಲ್ಲಿಯವರೆಗೂ ಹೆಚ್ಚು ಹೆಸರು ಮಾಡದ ನಟರಾಗಿದ್ದ ಅವರು, ನಂತರದಲ್ಲಿ ವಿಶ್ವದಾದ್ಯಂತ ಖ್ಯಾತಿ ಗಳಿಸಿದರು.

ಜೇಮ್ಸ್ ಬಾಂಡ್ ಆಗಿ ಅವರ ಜನಪ್ರಿಯತೆ ಎಷ್ಟು ಉತ್ತುಂಗಕ್ಕೆ ತಲುಪಿತು ಎಂದರೆ, ನಂತರದ ನಟರಾದ ರೋಜರ್ ಮೋರೆ, ಪೀರ್ಸ್ ಬ್ರಾಸ್ನಾನ್ ಹಾಗೂ ಡೇನಿಯಲ್ ಕ್ರೇಗ್ ಅವರಿಗೆ ಬಾಂಡ್ ಪಾತ್ರಗಳನ್ನು ನಿಭಾಯಿಸುವುದು ಸವಾಲಿನದ್ದಾಗಿತ್ತು.

1987ರಲ್ಲಿ 'ದಿ ಇನ್‌ಟಚೆಬಲ್ಸ್' ಚಿತ್ರದಲ್ಲಿ ಐರಿಶ್ ಪೊಲೀಸ್ ಆಗಿ ನಿರ್ವಹಿಸಿದ ಪಾತ್ರಕ್ಕಾಗಿ ಅವರಿಗೆ ಆಸ್ಕರ್ ದೊರೆತಿತ್ತು. 2006ರಲ್ಲಿ ಅವರು ಚಿತ್ರರಂಗದಿಂದ ನಿವೃತ್ತರಾಗಿದ್ದರು.

## ನಗರದಲ್ಲಿ ಇಂದು ಸೈಕ್ಲೋಥಾನ್

ಸೈ ಕಿಕ್ ಸೈಕ್ಲಿಂಗ್ ಕ್ಲಬ್ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 6.30 ಕ್ಕೆ ಅರಿಹಂತ್ ಅಪಾರ್ಟ್‌ಮೆಂಟ್‌ನಿಂದ ಸೈಕ್ಲೋಥಾನ್ ಹೊರಟು ನಗರದ ಮುಖ್ಯ ರಸ್ತೆಯಲ್ಲಿ ಸವಾರಿ ಮಾಡಿ, ಶ್ರೀ ಭಗವಾನ್ ಮಹಾವೀರ ಗೋಶಾಲೆಯಲ್ಲಿ ಕೊನೆಗೊಳ್ಳುವುದು.

ಈ ಸೈ ಕಿಕ್ ಸೈಕ್ಲಿಂಗ್‌ನಲ್ಲಿ 12 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಸೈಕ್ಲಿಸ್ಟ್‌ಗಳು ಭಾಗವಹಿಸಬಹುದು ಎಂದು ಸೈ ಕಿಕ್ ಕ್ಲಬ್ ಅಧ್ಯಕ್ಷ ರಮೇಶ್ ಜೈನ್ ತಿಳಿಸಿದ್ದಾರೆ.ಕಾರ್ಯಕ್ರಮದಲ್ಲಿ ಭಾಗವಹಿಸುವವರು ಮಾಸ್ಕ್ ಧರಿಸುವುದು, ಹೆಲ್ಮೆಟ್ ಮತ್ತು ಸಾಮಾಜಿಕ ಆಂತರ ಕಡ್ಡಾಯವಾಗಿರುತ್ತದೆ ಎಂದು ಅವರು ತಿಳಿಸಿದ್ದಾರೆ.



# ರಾಶಿ ಭವಿಷ್ಯ

**ದಿನಾಂಕ : 01.11.2020 ರಿಂದ 07.11.2020**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಸದಾ ಒತ್ತಡದಲ್ಲೇ ಇರುವ ನಿಮಗೆ ಈ ವಾರ ಸ್ವಲ್ಪ ಬಿಡುವು, ಕೌಟುಂಬಿಕ ವಿಷಯಗಳ ಕಡೆ ಗಮನವಿರಲಿ. ತಿಳಿಯದಂತೆ ಅನೇಕ ಅನಾವಶ್ಯಕ ಖರ್ಚುಗಳಿಗೊಂದು ಕಡಿವಾಣ ಹಾಕುವಿರಿ. ಹಾಗೆಂದ ಮಾತ್ರಕ್ಕೆ, ಆದಾಯ ದಲ್ಲೇನೂ ಹೆಚ್ಚಳ ನಿರೀಕ್ಷಿಸುವಂತಿಲ್ಲ, ಮನೆಯಲ್ಲಿ ಹಿರಿಯರೊಂದಿಗಿದ್ದ ಮುಸುಕಿನ ಗುದ್ದಾಟ ಕೊನೆಗೊಳ್ಳಲಿದೆ. ಸೋದರರಿಂದ ಆರ್ಥಿಕ ನೆರವು ನಿರೀಕ್ಷಿಸಬಹುದು. ಸಂಪಾದನೆ ಸಾಧಾರಣ. ಚಿನ್ನಾಭರಣ ವ್ಯಾಪಾರ ಚೆನ್ನಾಗಿ ನಡೆದರೂ, ಲಾಭ ಅಷ್ಟಕ್ಕಷ್ಟೆ. ಹೊಸ ವಾಹನ ಖರೀದಿಗೆ ಆಲೋಚಿಸಿ, ಮಾನಸಿಕ ನೆಮ್ಮದಿಗೆ ಯೋಗ, ಧ್ಯಾನ ಮಾಡಿ. ಸೋಮ, ಮಂಗಳ, ಗುರು ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ನಿರೀಕ್ಷಿತ ಮೂಲಗಳಿಂದ ದೊರೆಯಬೇಕಾಗಿದ್ದ ನೆರವು ಬರದೆ, ಅದು ನಿಮ್ಮನ್ನು ಚಿಂತೆಗೆ ಈಡು ಮಾಡಬಹುದು. ಹಿರಿಯರ ನೆರವು ಕೋರುವುದು ಉತ್ತಮ. ಅನಿರೀಕ್ಷಿತ ಖರ್ಚು ವೆಚ್ಚಗಳು ಎದುರಾಗಿ ಉಳಿತಾಯದ ಗಂಟನ್ನು ಕರಗಿಸಬಹುದು. ನಿಮ್ಮ ಕಾರ್ಯವೈಖರಿಯನ್ನು, ಸದ್ಯದ ಪರಿಸ್ಥಿತಿಗೆ ತಕ್ಕಂತೆ ಬದಲಾಯಿಸುವುದು ಉತ್ತಮ. ಮಕ್ಕಳ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಪ್ರಗತಿ. ಮತ್ತೊಬ್ಬರ ಮಾತನ್ನು ಕೊನೆಯ ಪಕ್ಷ ಕೇಳಿಸಿಕೊಳ್ಳುವಷ್ಟು ತಾಳ್ಮೆ ಇರಲಿ. ಸ್ನೇಹಿತರೊಂದಿಗೆ ಪಾಲು ದಾರಿಕೆಯಲ್ಲಿ ಹೂಡಿದ್ದ ಬಂಡವಾಳ ಇನ್ನು ಮುಂದೆ ಲಾಭ ತರಲಿದೆ. ರೈತರಿಗೆ ಹೆಚ್ಚಿನ ಆದಾಯ, ಬುಧ, ಗುರು, ಶುಕ್ರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**

ಖಾಸಗಿ ಕಂಪನಿ ನೌಕರರಿಗೆ ಜವಾಬ್ದಾರಿ ಹೆಚ್ಚಾದರೂ, ವೇತನ ದಲ್ಲಿ ಹೆಚ್ಚಳ ನಿರೀಕ್ಷಿಸುವಂತಿಲ್ಲ. ಹಿರಿಯರೊಂದಿಗೆ ವಿನಾಕಾರಣ ವಾಗ್ವಾದ ಬೇಡ. ತಪ್ಪಿದಲ್ಲಿ, ಸಂಬಂಧಕ್ಕೇ ಧಕ್ಕೆ ಬರಬಹುದು. ಸೋದರನಿಗೆ ಕಂಕಣ ಭಾಗ್ಯ ಕೂಡಿ ಬರಲಿದೆ. ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಓದಲು ಸಮಾಜದಿಂದ ಆರ್ಥಿಕ ನೆರವು ದೊರೆಯಲಿದೆ. ಪೂರ್ವಿಕರು ಖರೀದಿಸಿದ್ದ ಹೊಲ, ಗದ್ದೆಗಳ ತಕರಾರುಗಳು ಕ್ರಮೇಣ ಪರಿಹಾರವಾಗಲಿವೆ. ವಿದೇಶಿ ವ್ಯವಹಾರದಲ್ಲಿ ಬಂಡವಾಳ ಹೂಡುವ ಮೊದಲು ಮತ್ತೊಮ್ಮೆ ಆಲೋಚಿಸುವುದು ಲೇಸು. ಅತಿಯಾದ ಪ್ರವಾಸದಿಂದ ಆರೋಗ್ಯದಲ್ಲಿ ವ್ಯತ್ಯಾಸ, ನೆರೆ ಹೊರೆಯವರೊಂದಿಗೆ ಸೌಹಾರ್ದತೆಯಿಂದ ವರ್ತಿಸಿರಿ. ಭಾನು, ಬುಧ, ಗುರು ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ನಿಮ್ಮಮಾನಸಿಕ ಒತ್ತಡವನ್ನು ಗಮನಿಸುತ್ತಿರುವ ಸಹೋದ್ಯೋಗಿಗಳು, ನಿಮ್ಮಿಂದ ತಪ್ಪಾಗುವಂತೆ ಮಾಡಬಹುದು. ಆದ್ದರಿಂದ ಒತ್ತಡದ ಸ್ಥಿತಿಯಿಂದ ಹೊರ ಬರಲು ಪ್ರಯತ್ನಿಸಿ. ಆದಾಯದಲ್ಲಿ ಹೆಚ್ಚಳವಿಲ್ಲದಿದ್ದರೂ ಅಗತ್ಯಕ್ಕೆ ತಕ್ಕಷ್ಟು ಸಂಪಾದನೆಯಂತೂ ಆಗಲಿದೆ. ಚಿಕ್ಕ ಮಕ್ಕಳ ಅಪೇಕ್ಷೆಯಂತೆ ಸಾಕುತ್ತಿರುವ ಪ್ರಾಣಿಗಳಿಂದ ಇರುಸುಮುರುಸಾಗಬಹುದು. ಮತ್ತೊಬ್ಬರ ವೈಯಕ್ತಿಕ ವಿಷಯ ಗಳಲ್ಲಿ ನಿಮ್ಮಪ್ರವೇಶ ಬೇಡ. ಇಲ್ಲವಾದಲ್ಲಿ ಅಪಮಾನಕ್ಕೀಡಾಗುವಿರಿ. ಸಂಶೋಧನಾ ರಂಗದಲ್ಲಿ ಪ್ರಗತಿ ಸಾಧಾರಣ, ಸೋದರರ ಆಗಮನದಿಂದ ಕೌಟುಂಬಿಕ ಸಮಸ್ಯೆಯೊಂದು ಬಗೆಹರಿಯಲಿದೆ. ಸೋಮ, ಗುರು, ಶುಕ್ರ ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ಪೆ.ಟ.ಟಿ.ಟು.ಟೆ)**

ಹೊಸ ಮನೆ ಕಟ್ಟುವ ವಿಚಾರದಲ್ಲಿದ್ದ ನಿವೇಶನದ ತಕರಾರು ಸುಖಾಂತ್ಯವಾಗಲಿದೆ. ಕಲೆ, ಸಾಹಿತ್ಯ ಮೊದಲಾದ ರಂಗದಲ್ಲಿರುವವರಿಗೆ ಉತ್ತಮ ಆದಾಯ ದೊರೆಯಲಿದೆ. ಯಾರೊಬ್ಬರ ವಿಚಾರದಲ್ಲಾಗಲಿ, ಅತಿಯಾದ ನಿರೀಕ್ಷೆ ಅಷ್ಟು ಒಳ್ಳೆಯದಲ್ಲ, ವಿದ್ಯಾರ್ಥಿಗಳು ಹೆಚ್ಚಿನ ಪರಿಶ್ರಮ ಪಡದೆ, ಉತ್ತಮ ಫಲಿತಾಂಶ ಪಡೆಯಲು ಸಾಧ್ಯವೇ ಇಲ್ಲ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚು ಪಾಲ್ಗೊಳ್ಳುವಿರಿ. ಆರ್ಥಿಕ ಸ್ಥಿತಿ ಕ್ರಮೇಣ ಸುಧಾರಿಸಲಿದೆ. ಬಹು ನಿರೀಕ್ಷಿತ ಸಂತಸದ ಸಮಾಚಾರ ಕೇಳಿಬರಲಿದೆ. ಸಂಗಾತಿಯೊಂದಿಗೆ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳುವಿರಿ. ಸ್ನೇಹಿತರ ಸಲಹೆಗಳು ಸಕಾಲಿಕವಾಗಿರುತ್ತದೆ. ಅದರ ಸದುಪಯೋಗಪಡೆದುಕೊಳ್ಳಿ.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಅಸಾಧ್ಯವೆಂದು ಭಾವಿಸಿದ್ದ ಎಷ್ಟೋ ಕೆಲಸಗಳು ಈ ವಾರ ಕ್ರಮೇಣ ಕೈಗೂಡಲಿವೆ. ಇಷ್ಟು ದಿನ ಕಾಡುತ್ತಿದ್ದ ಮಗನ ನಿರುದ್ಯೋಗ ಸಮಸ್ಯೆ ಬಗೆಹರಿಯುವ ಎಲ್ಲಾ ಲಕ್ಷಣಗಳಿವೆ. ಅತಿಯಾದ ಅಥವಾ ಅಕಾಲಿಕ ಭೋಜನದಿಂದ ಆರೋಗ್ಯದಲ್ಲಿ ತುಸು ವ್ಯತ್ಯಾಸವಾಗಬಹುದು. ಕುಟುಂಬದ ಸದಸ್ಯರ ವರ್ತನೆಯಲ್ಲಾಗುವ ವ್ಯತ್ಯಾಸ, ನಿಮಗೆ ಬೇಸರವನ್ನುಂಟು ಮಾಡಲಿದೆ. ಹಲವು ಸನ್ನಿವೇಶಗಳು ನಿಮ್ಮ ಲೆಕ್ಕಾಚಾರಕ್ಕೆ ವಿರುದ್ಧವಾಗಬಹುದು. ಗೃಹನಿರ್ಮಾಣ ಸಾಮಗ್ರಿ ವ್ಯಾಪಾರಿಗಳಿಗೆ ಕಾನೂನಿನ ತೊಡಕುಗಳು ಎದುರಾಗಬಹುದು. ಹಾಗೆಂದ ಮಾತ್ರಕ್ಕೆ ಚಿಂತೆ ಬೇಕಿಲ್ಲ. ಆದಾಯದ ಮೂಲ ನಿಮ್ಮ ನಿರೀಕ್ಷೆಗಿಂತಲೂ ಹೆಚ್ಚು. ಭಾನು, ಮಂಗಳ, ಬುಧ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಪಟ್ಟು ಹಿಡಿದು, ಮುಂದುವರೆದಲ್ಲಿ ಮಾತ್ರ ಹಿಡಿದ ಕೆಲಸ, ಕಾರ್ಯಗಳನ್ನು ಸಾಧಿಸಲು ಸಾಧ್ಯ. ಹಿತೈಷಿಗಳಂತೆ ನಟಿಸಿ, ನಿಮ್ಮನ್ನು ತಪ್ಪುದಾರಿಗೆ ಎಳೆಯುವವರ ಬಗ್ಗೆ ಎಚ್ಚರದಿಂದಿರಿ. ಉದ್ಯೋಗದಲ್ಲಿ ಇಲ್ಲ ಸಲ್ಲದ ಆಪಾದನೆಗಳು ಬರುವ ಎಲ್ಲಾ ಲಕ್ಷಣಗಳಿವೆ. ಅಪವ್ಯಯ, ಆರ್ಥಿಕವಾಗಿ ನಿಮ್ಮನ್ನು ಹೈರಾಣಾಗಿಸಬಹುದು. ಬಂಧುಗಳೊಂದಿಗೆ ಅತಿಯಾದ ಸಲಿಗೆ ಒಳ್ಳೆಯದಲ್ಲ. ಪದವೀಧರರಿಗೆ ಉತ್ತಮ ನೌಕರಿ ಸಿಗಲಿದೆ. ಮರೆತು ಮಾತಾಡುವುದಕ್ಕಿಂತ ಅರಿತು ಮಾತಾಡುವುದು ಉತ್ತಮ. ಮಾತಿನ ಚಕಮಕಿ ಕುಟುಂಬದ ನೆಮ್ಮದಿಯನ್ನು ಹಾಳುಮಾಡೀತು. ಸರ್ಕಾರಿ ನೌಕರರಿಗೆ ವರ್ಗಾವಣೆ. ಬುಧ, ಶುಕ್ರ, ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಮೇಲಾಧಿಕಾರಿಗಳ ಸಂಪೂರ್ಣ ಬೆಂಬಲ. ದೇಹಾರೋಗ್ಯವನ್ನು ಅಲಕ್ಷಿಸಿ ಅತಿಯಾದ ತಿರುಗಾಟ ಒಳ್ಳೆಯದಲ್ಲ. ಉದ್ಯಮಿಗಳಿಗೆ ಅನುಕೂಲಕರವಾದ ದಿನಗಳು. ಸಿನಿಮಾ ನಟ-ನಟಿಯರಿಗೆ ಹಾಗೂ ಸಂಗೀತ ನಿರ್ದೇಶಕರಿಗೆ ಅತ್ಯುತ್ತಮ. ಮಡದಿಯ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಮಗನಿಗೆ ಉದ್ಯೋಗ ದೊರಕಿಸಿ ಕೊಡಲು ಕಷ್ಟಪಡಬೇಕಾದೀತು. ರಕ್ಷಣಾ ಇಲಾಖೆಯಲ್ಲಿರುವವರಿಗೆ ಬಿಡುವಿಲ್ಲದ ಕೆಲಸ. ಆದಾಯದ ಹೆಚ್ಚಳಕ್ಕೆ ಹಲವು ಹೊಸ ಮೂಲಗಳು ಕಂಡು ಬರಲಿವೆ. ಹಿರಿಯರ ಮಾತು ಮತ್ತು ಸಲಹೆಗಳು ಉತ್ತಮ ಮಾರ್ಗದರ್ಶನವಾಗಲಿದೆ. ಅವಿವಾಹಿತರಿಗೆ ಕಂಕಣ ಭಾಗ್ಯ. ಸೋಮ, ಮಂಗಳ, ಬುಧ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಅಸಾಧ್ಯವೆಂದು ಭಾವಿಸಿದ್ದ ಕಾರ್ಯವೊಂದು ಸಾಧ್ಯವಾಗುವ ಶುಭ ಸಮಾಚಾರ ಇಷ್ಟರಲ್ಲೇ ಕೇಳಿ ಬರಲಿದೆ. ಗೊಂದಲದಲ್ಲಿ ಸಿಕ್ಕ ಆರ್ಥಿಕ ಪರಿಸ್ಥಿತಿ ಒಂದು ತಹಬಂದಿಗೆ ಬರಲಿದೆ. ಹೊಸ ಮನೆ ಕಟ್ಟುವ ವಿಚಾರವಿದ್ದಲ್ಲಿ ಈಗ ಆರಂಭಿಸಲು ಸಕಾಲ. ಹಣಕಾಸುಗಳು ಅಪವ್ಯಯವಾಗದಂತೆ ನೋಡಿಕೊಳ್ಳಿ. ತುಸು ತಡವಾದರೂ, ಅದು, ಸಂಪೂರ್ಣ ದೊರೆಯಲಿದೆ. ಲೇವಾದೇವಿಗಾರರು ತುಸು ಎಚ್ಚರದಿಂದಿರಿ. ಮಕ್ಕಳ ಏಳಿಗೆ ತುಸು ನೆಮ್ಮದಿ ತರಲಿದೆ. ನೆರವು ಕೋರಿ ಬರುವ ವಿದ್ಯಾರ್ಥಿಗಳಿಗೆ ಯಥಾಶಕ್ತಿ ಸಹಾಯ ಮಾಡಿರಿ. ಭಾನು, ಸೋಮ, ಗುರು ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಇಷ್ಟುದಿನ ವೃತ್ತಿಯಲ್ಲಿ ಕಷ್ಟಪಡುತ್ತಿದ್ದ ನಿಮಗೆ ಈ ವಾರ ಉತ್ತಮ ದಿನಗಳು ಕಂಡು ಬರಲಿವೆ. ರಾಜಕಾರಣಿಗಳು ತಾವುಗಳು ಆಡಬಹುದಾದ ಮಾತುಗಳ ಬಗ್ಗೆ ಹಿಡಿತ ತಪ್ಪಿದಲ್ಲಿ ಅದಕ್ಕೆ ಭಾರೀ ತಲೆದಂಡ ತೆರಬೇಕಾದೀತು. ಆದಾಯ ಅಷ್ಟೇ ಹೆಚ್ಚಿದ್ದರೂ ಮಿತವಾಗಿ ಬಳಸುವುದು ಉತ್ತಮ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಹಬ್ಬದ ವಾತಾವರಣ, ರೈತಾಪಿ ಮಿತ್ರರು ಹೊಸ ಪದ್ಧತಿಯಲ್ಲಿ ಬೆಳೆ ಬೆಳೆಯುವ ವಿಚಾರದಲ್ಲಿ ತಜ್ಞರಿಂದ ಸಲಹೆ ಪಡೆಯುವುದು ಉತ್ತಮ. ತಮಾಷೆಗಾಗಿ ಆಡುವ ಮಾತು ಮುಖ ಭಂಗಕ್ಕೆ ಕಾರಣವಾದೀತು. ಕ್ರೀಡಾಪಟುಗಳಿಗೆ ಅತ್ಯುತ್ತಮ ಅವಕಾಶಗಳು, ಕುಲದೇವತಾರಾಧನೆ ಮಾಡಿ. ಬುಧ, ಶುಕ್ರ, ಶನಿವಾರ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಬೇರೆಯವರು ನೀಡುವ ಸಹಾಯ ಸದುಪಯೋಗಪಡಿಸಿಕೊಳ್ಳಿ. ತಾತ್ಕಾಲಿಕವಾಗಿ ಕೆಲಸ ಮಾಡುವವರಿಗೆ ಉದ್ಯೋಗದಲ್ಲಿ ಭದ್ರತೆ. ಸಾಲಗಳನ್ನು ತೀರಿಸಲು ಬಂದ ಅವಕಾಶ ಅದೃಷ್ಟವೆಂದು ತಿಳಿಯಿರಿ. ನವದಂಪತಿಗಳು ತಾಳ್ಮೆಯಿಂದ ನಡೆದುಕೊಂಡಲ್ಲಿ ಸುಖ. ಸ್ತ್ರೀಯರ ವ್ಯವಹಾರದಲ್ಲಿ ಮಂದಾತಿಮಂದಗತಿ ಕಂಡು ಬರಲಿದೆ. ಅಧ್ಯಾಪಕ ವರ್ಗದವರಿಗೆ ಮನೆ ಪಾಠದಿಂದ ಗಳಿಕೆ ಹೆಚ್ಚಲಿದೆ. ಶೀತ-ಬಾಧೆ ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಕುಲದೇವತಾ ದರ್ಶನ ಪಡೆಯಿರಿ. ಗುರು, ಶುಕ್ರ, ಶನಿವಾರ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಸದ್ಯದ ಪರಿಸ್ಥಿತಿಯಲ್ಲಿ ಬೇರೆಯವರನ್ನು ಪಾಲುದಾರರನ್ನಾಗಿ ತೆಗೆದುಕೊಳ್ಳುವುದು ಅಥವಾ ನೀವು ಮತ್ತೊಬ್ಬರ ವ್ಯವಹಾರದಲ್ಲಿ ಪಾಲುದಾರರಾಗಲು ಯತ್ನಿಸುವುದು ಆರ್ಥಿಕ ದೃಷ್ಟಿಯಿಂದ ಅಷ್ಟು ಒಳ್ಳೆಯದಲ್ಲ. ಮತ್ತೊಬ್ಬರ ಹಣಕಾಸಿನ ವಿಚಾರದಲ್ಲಿ ಜಾಮೀನುದಾರರಾದಲ್ಲಿ ನೀವಾಗಿಯೇ ಅಪಾಯವನ್ನು ತಂದುಕೊಂಡಂತೆ. ಆಲಸ್ಯಬೇಡ, ಅಮೂಲ್ಯ ವಸ್ತುಗಳ ಖರೀದಿಯಲ್ಲಿ ಮೋಸ, ಮಹಿಳಾ ರಾಜಕಾರಣಿಗಳಿಗೆ ಪಕ್ಷದ ವರಿಷ್ಠರಿಂದ ಬೆಂಬಲ ದೊರೆಯಲಿದೆ. ಎದುರಾಳಿ ಎಷ್ಟೇ ಪ್ರಭಾವ ಶಾಲಿಯಾಗಿದ್ದರೂ ನಿಮಗೆ ಸೋತು ಶರಣಾಗುವರು. ನವಗ್ರಹಾರಾಧನೆ ಮಾಡಿ. ಭಾನು, ಸೋಮ, ಗುರು ಶುಭ ದಿನಗಳು.

**ವಿಶೇಷ ದಿನ : ದಿನಾಂಕ : 4.11.2020ನೇ ಬುಧವಾರ ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ 8.47ಕ್ಕೆ**

# ಎಲ್ಲಾ ಜಾತಿ, ಸಮುದಾಯಗಳ ಬೆಳವಣಿಗೆಯಲ್ಲಿ ಶ್ರೀ ವಾಲ್ಮೀಕಿ ಋಷಿ



ವಾಲ್ಮೀಕಿ ಒಬ್ಬರು ಋಷಿ ಹಾಗೂ ಸಂಸ್ಕೃತ ಕವಿ. ರಾಮಾಯಣ ಮಹಾಕಾವ್ಯದ ಕರ್ತೃ. ವಾಲ್ಮೀಕಿಯನ್ನು ಆದಿಕವಿ ಎಂತಲೂ ಕರೆಯುತ್ತಾರೆ. ವಾಲ್ಮೀಕಿಯ ಜೀವನದ ಕುರಿತಾಗಿ ಅನೇಕ ದಂತಕಥೆಗಳಿವೆ. ಅದರಲ್ಲಿ ಒಂದು ಕಥೆಯ ಪ್ರಕಾರ, ವಾಲ್ಮೀಕಿ ಋಷಿಯಾಗುವ ಮೊದಲು ರತ್ನಾಕರ ಎಂಬ ಸಾಮಾನ್ಯ ಮನುಷ್ಯ. ನಾರದನ ಉಪದೇಶದಿಂದ ರತ್ನಾಕರನಿಗೆ ಜ್ಞಾನೋದಯವಾಯಿತೆಂದು ಹೇಳಲಾಗುತ್ತದೆ. ವಾಲ್ಮೀಕಿ ಮಹರ್ಷಿಗಳು ಪ್ರಚೇತಸ ಮುನಿಯ ಮಗ. ಹೀಗಾಗಿ ಅವರಿಗೆ 'ಪ್ರಾಚೇತಸ' ಎಂತಲೂ ಕರೆಯಲಾಗುತ್ತದೆ. ಪರಮಾತ್ಮನನ್ನು ಕುರಿತು ಬಹಳ ವರ್ಷಗಳ ಕಾಲ ತಪಸ್ಸು ಮಾಡುತ್ತಿದ್ದಾಗ ಅವರ ಸುತ್ತ ಹುತ್ತ ಬೆಳೆದಿತ್ತು. ಸಂಸ್ಕೃತದಲ್ಲಿ ಹುತ್ತ ಎಂದರೆ ವಲ್ಮೀಕ ಎಂದು ಕರೆಯುತ್ತಾರೆ. ಇದನ್ನು ಭೇದಿಸಿಕೊಂಡು ಹೊರಗೆ ಬಂದಿದ್ದರಿಂದ 'ವಾಲ್ಮೀಕಿ' ಎಂಬ ಹೆಸರು ಬಂತು.

ವಾಲ್ಮೀಕಿ ಮಹರ್ಷಿಗಳು ತಮಸಾ ನದ ತೀರದಲ್ಲಿ ಸಂತೋಷವಾಗಿ ಹಾರಾಡುತ್ತಿದ್ದ ಕ್ರೌಂಚಪಕ್ಷಿ ಜೋಡಿಯನ್ನು ನೋಡುತ್ತಿದ್ದಾಗ, ಬೇಡನೊಬ್ಬನು ಒಂದು ಬಾಣ ಹೂಡಿ ಅವುಗಳಲ್ಲಿ ಗಂಡು ಹಕ್ಕಿಯನ್ನು ಕೊಂದು ಬಿಡುತ್ತಾನೆ. ಅದರ ಸಂಗಾತಿ ಹೆಣ್ಣು ಹಕ್ಕಿಯು ಸಂಕಟದಿಂದ ಕೂಗಲಾರಂಭಿಸುತ್ತದೆ. ಈ ಹೃದಯ ವಿದ್ರಾವಕ ಸನ್ನಿವೇಶವನ್ನು ನೋಡಿ, ಕರುಣೆ, ದುಃಖ, ಕೋಪದಿಂದ ಮಹರ್ಷಿಗಳು ಬೇಡನನ್ನು ಶಪಿಸುವಾಗ, ಶೋಕದಿಂದ ಈ ಕೆಳಕಂಡ ವಾಕ್ಯವನ್ನು ಶ್ಲೋಕ ರೂಪದಲ್ಲಿ ಉದ್ಧರಿಸುತ್ತಾರೆ.

***ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ***
***ಶಾಶ್ವತೀಃ ಸಮಾಃ ।***
***ಯತ್ಕ್ರೌಂಚಮಿಥುನಾದೇಕಮವಧೀಃ***
***ಕಾಮಮೋಹಿತಮ್ ॥***

ಇದು ರಾಮಾಯಣ ರಚನೆಗೆ ಪ್ರೇರಣೆಯಾದ ಘಟನೆ ಹಾಗೂ ಆ ಸಂದರ್ಭಕ್ಕೆ ಪ್ರತಿ ಕ್ರಿಯೆಯಾಗಿ ಶ್ಲೋಕ ರೂಪದಲ್ಲಿ ವಾಲ್ಮೀಕಿಯವರ ಬಾಯಿಂದ ಹೊರಹೊಮ್ಮಿದ ಮಾತುಗಳು.

***ಈ ಶ್ಲೋಕದ ಅರ್ಥ ಹೀಗಿದೆ :***

***ಅಕಾರಣವಾಗಿ ಹಕ್ಕಿಯನ್ನು ಕೊಂದ ಹೇ ಅನ್ಯಾಯಿ! ನಿನ್ನ ಪಾಪದ ಫಲವಾಗಿ ನೀ ಈ ಕೂಡಲೇ ಸಾಯಿ॥***

ಆ ವೇಳೆಗೆ ಬ್ರಹ್ಮದೇವ ಮಹರ್ಷಿಗಳ ಆಶ್ರಮಕ್ಕೆ ಬಂದು ಇದೇ ಶ್ಲೋಕ ರೂಪದಲ್ಲಿ ರಾಮಾಯಣ ಕಾವ್ಯ ರಚಿಸಲು ಹೇಳುತ್ತಾರೆ. ನಾರದರು ತಮಗೆ ಸಂಗ್ರಹವಾಗಿ ಹೇಳಿದ್ದ ರಾಮನ ಕಥೆಯನ್ನು ವಾಲ್ಮೀಕಿ ಮಹರ್ಷಿಗಳು 24,000 ಶ್ಲೋಕಗಳನ್ನೊಳಗೊಂಡ ಮಹಾಕಾವ್ಯವಾಗಿ ಬರೆದರು.

ಉತ್ತರ ರಾಮಾಯಣದೊಳಗೊಂದು ಪಾತ್ರವಾಗಿ ವಿವರಿಸಲಾಗಿದೆ. ರಾಮನು ಅಯೋಧ್ಯೆಯ ಕೆಲವು ಸಾಮಾನ್ಯ ಜನರು ಸೀತೆಯ ಬಗ್ಗೆ ಅರೋಪ ಮಾಡುತ್ತಿರುವುದನ್ನು ಗೂಢಚಾರರ ಮೂಲಕ ತಿಳಿದು, ನೊಂದು ತುಂಬು ಗರ್ಭಿಣಿ ಸೀತೆಯನ್ನು ಪರಿತ್ಯಾಗ ಮಾಡುತ್ತಾನೆ. ರಾಮನ ಆಜ್ಞೆಯಂತೆ ಸೀತೆಯನ್ನು ಲಕ್ಷ್ಮಣ ತನ್ನ ವಿವೇಕವನ್ನು ಉಪಯೋಗಿಸಿ ವಾಲ್ಮೀಕಿ ಮುನಿಯ ಆಶ್ರಮದ ಹತ್ತಿರ ಕಾಡಿನಲ್ಲಿ ಬಿಟ್ಟು ಹೋಗುತ್ತಾನೆ. ಅರಣ್ಯದಲ್ಲಿ ಶೋಕತಪ್ತಳಾಗಿದ್ದ ಸೀತೆಯನ್ನು ವಾಲ್ಮೀಕಿ ಮಹರ್ಷಿಗಳು ತಮ್ಮ ಆಶ್ರಮಕ್ಕೆ ಕರೆತಂದು, ಋಷಿ ಪತ್ನಿಯರ ಮೂಲಕ ಆಕೆಯನ್ನು ಉಪಚರಿಸಿ, ಆದರಿಸುತ್ತಾರೆ. ಅಲ್ಲೇ ಲವ-ಕುಶರ ಜನನವಾಗುತ್ತದೆ. ಆ ಅವಳಿ ಮಕ್ಕಳಿಗೆ ವಾಲ್ಮೀಕಿ ಮಹರ್ಷಿಗಳೇ ಗುರುಗಳು. ರಾಮಾಯಣ ಮಹಾಕಾವ್ಯದ ಗಾಯನವನ್ನು ಲವ-ಕುಶರಿಗೆ ಕಲಿಸಿಕೊಡುತ್ತಾರೆ. ವಾಲ್ಮೀಕಿ ಮಹರ್ಷಿಗಳು ಲವ-ಕುಶರ ಸಂಗಡ ರಾಮನಲ್ಲಿಗೆ ಬಂದು ರಾಮಾಯಣದ ಬಗ್ಗೆ ವಿವರಿಸಿರುತ್ತಾರೆ. ರಾಮನಲ್ಲಿಗೆ ಸೀತೆಯನ್ನೂ ವಾಲ್ಮೀಕಿ ಮಹರ್ಷಿಗಳೇ ಕರೆತರುತ್ತಾರೆ.

ಯಾವುದೇ ಸಮುದಾಯಕ್ಕೆ ಜಾತಿಯ ಅಭಿಮಾನವಿರಲಿ. ಅದು ಇನ್ನೊಂದು ಜಾತಿಯನ್ನು ದ್ವೇಷಿಸುವ ಹಂತ ತಲುಪದಂತಿರಬೇಕು. ಹಾಗಾಗಿ ಇತರೆ ಜಾತಿ, ಸಮುದಾಯಗಳ ಬಗ್ಗೆ ಪ್ರೀತಿ, ಸ್ನೇಹದ ಬೆಸುಗೆ ಸಾಧ್ಯವಾಗಬೇಕು. ವಾಲ್ಮೀಕಿ ಜಯಂತಿಯಲ್ಲಿ ಆಯಾ ಊರುಗಳ ಬೇಡ ಸಮುದಾಯದ ವರನ್ನು ಮಾತ್ರ ಒಳಗೊಳ್ಳದೆ ಎಲ್ಲಾ ಜಾತಿ, ಸಮುದಾಯಗಳ ವಿಶ್ವಾಸ ಪಡೆದು ಕೂಡಿಕೊಂಡು ಆಚರಣೆ ಮಾಡಲಾಗುತ್ತಿದೆ. ಹರಿಹರದ ರಾಜನಹಳ್ಳಿಯಲ್ಲಿ ಶ್ರೀ ವಾಲ್ಮೀಕಿ ಗುರುಪೀಠವನ್ನು ಲಿಂಗೈಕ್ಯ ಜಗದ್ಗುರು ಶ್ರೀಶ್ರೀಶ್ರೀ ಪುಣ್ಯಾನಂದಪುರಿ ಶ್ರೀಗಳು ಸ್ಥಾಪಿಸಿದರು. ಈಗ ಈ ಮಠದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಜಗದ್ಗುರು ಶ್ರೀಶ್ರೀಶ್ರೀ ಪ್ರಸನ್ನಾನಂದ ಶ್ರೀಗಳು ಹಗಲಿರುಳು ಶ್ರಮಿಸುತ್ತಿದ್ದಾರೆ. ಇವರ ಜೊತೆಗೆ ಅನೇಕ ಗುರುಪೀಠಗಳು, ಜಾತಿಯ ಮುಖಂಡರು ಹಾಗೂ ಇತರೆ ಜಾತಿಯ ಮುಖಂಡರು ಸಹ ಕೈ ಜೋಡಿಸಿದ್ದಾರೆ.

ನಮ್ಮ ಕಾಲೇಜಿನ ವತಿಯಿಂದ ರಾಜನಹಳ್ಳಿಯ ಶ್ರೀ ವಾಲ್ಮೀಕಿ ಗುರುಪೀಠದಲ್ಲಿ ಎನ್.ಎಸ್.ಎಸ್. ಶಿಬಿರವನ್ನು ಆಯೋಜಿಸಿದ್ದಾಗ ಶ್ರೀಗಳು ನಮಗೆ ಬಹಳಷ್ಟು ಸಹಾಯ, ಸಹಕಾರ ಮತ್ತು ಉತ್ತಮವಾದ ಜೀವನ ಮೌಲ್ಯಗಳನ್ನು ಹಾಗೂ ನಮ್ಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ನೀಡಿದ್ದಾರೆ ಎಂಬುದರಲ್ಲಿ ಸಂದೇಶವಿಲ್ಲ. ಪ್ರಯುಕ್ತ ನಾವೆಲ್ಲರೂ ಈ ಮಠಕ್ಕೆ ಆಭಾರಿಯಾಗಿದ್ದೇವೆ.

**- ಪ್ರೊ. ಕೆ.ಬಿ. ಮಂಜುನಾಥ್**
ಸಹ ಪ್ರಾಧ್ಯಾಪಕರು ಮತ್ತು
ಎನ್.ಎಸ್.ಎಸ್. ಅಧಿಕಾರಿಗಳು
ಶ್ರೀಮತಿ ಗಿರಿಯಮ್ಮ ಪದವಿ ಕಾಲೇಜು,
ಹರಿಹರ.

# ವಿನೋಬನಗರದಲ್ಲಿ ಗಬ್ಬು ನಾರುತ್ತಿರುವ ಕಸದ ರಾಶಿ !





ದಾವಣಗೆರೆ, ಅ.31- ವಿನೋಬನಗರದ 2ನೇ ಮುಖ್ಯರಸ್ತೆ ಅಮಿತ್ ಚಿತ್ರಮಂದಿರದ ಮುಂಭಾಗ ಇರುವ ಖಾಲಿ ಜಾಗದಲ್ಲಿ ಕಸದ ರಾಶಿಯು ಗಬ್ಬು ವಾಸನೆಯಿಂದ ತುಂಬಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಖಾಸಗಿ ವ್ಯಕ್ತಿಯೊಬ್ಬರಿಗೆ ಸೇರಿದ ಈ ಖಾಲಿ ಜಾಗದಲ್ಲಿ ನಿತ್ಯ ನೂರಾರು ಜನರು ಕಸವನ್ನು ತಂದು ದಿನಾ ಸುರಿಯುತ್ತಿದ್ದಾರೆ. ಮೊನ್ನೆ ಸುರಿದ ಮಳೆಯಿಂದ ಅದು ಕೊಚ್ಚೆಯಂತಾಗಿ ದುರ್ವಾಸನೆ ಬೀರುತ್ತಿದೆ. ಇದರಿಂದ ಅಲ್ಲಿ ವಾಸಿಸುವ ಜನರು ಹಾಗೂ ವ್ಯಾಪಾರಸ್ಥರು ನರಕಯಾತನೆ ಅನುಭವಿಸುವಂತಾಗಿದೆ.

ಖಾಲಿ ಜಾಗ ಪೂರ್ತಿ ಕೆಸರು ಗದ್ದೆಯಂತಾಗಿದ್ದು, ಹಂದಿಗಳ ತಾಣವಾಗಿ ಮಾರ್ಪಟ್ಟಿದೆ. ಇದರ ಬಗ್ಗೆ ಸ್ಥಳೀಯ ವಾಸಿಗಳು ಜನಪ್ರತಿನಿಧಿಗಳಿಗೆ ದೂರು ನೀಡಿದರೂ ಪ್ರಯೋಜನವಾಗದಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಜನಪ್ರತಿನಿಧಿಗಳು ಮತ್ತು ಪಾಲಿಕೆ ಆರೋಗ್ಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕೆಂದು ಈ ಭಾಗದ ನಾಗರಿಕರು ಆಗ್ರಹಿಸಿದ್ದಾರೆ.

# ಮಲಬಾರ್ ಗೋಲ್ಡ್‌ನಿಂದ ಡೈಮಂಡ್ ಶೋ

ದಾವಣಗೆರೆ, ಅ.31- ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ 'ಮೈನ್' ಡೈಮಂಡ್ ಶೋ ಎಂಬ ಹೆಸರಿನಲ್ಲಿ ವಜ್ರಾಭರಣಗಳ ಪ್ರದರ್ಶನವು ತನ್ನ ದಾವಣಗೆರೆ ಸ್ಟೋರ್‌ನಲ್ಲಿ ಇಂದಿನಿಂದ ನವೆಂಬರ್ 8 ರವರೆಗೆ ನಡೆಯಲಿದೆ. ವಿಶೇಷವೆಂದರೆ, ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಆಡಳಿತ ಮಂಡಳಿ ಸದಸ್ಯರು ಮತ್ತು ಹಿತೈಷಿಗಳ ಸಮ್ಮುಖದಲ್ಲಿ ಈ ಪ್ರದರ್ಶನವನ್ನು ಗ್ರಾಹಕರೇ ಉದ್ಘಾಟನೆ ಮಾಡಿದರು.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಸ್ಟೋರ್‌ನ ಮುಖ್ಯಸ್ಥ ಬೇಸಿಲ್ ರಾಜ್ ಅವರು ಮಾತನಾಡಿ, ಈ ಮೇಳದಲ್ಲಿ ವಿಸ್ತಾರವಾದ ಬ್ರೈಡಲ್, ಸಾಲಿಟೇರ್, ಪ್ರತಿದಿನ ಧರಿಸುವ ಸಂಗ್ರಹ, ಸೆಲೆಬ್ರೇಷನ್ ನೆಕ್ಲೇಸ್, ಪುರುಷರ ಆಭರಣ ಹಾಗೂ ಪ್ಲಾಟಿನಂ ಆಭರಣಗಳ ಸಂಗ್ರಹಗಳಿವೆ ಎಂದು ತಿಳಿಸಿದರು.

ಪ್ರದರ್ಶನದ ವೇಳೆ ಮೇನ್ ಡೈಮಂಡ್ ಆಭರಣಗಳನ್ನು ಖರೀದಿಸಿದರೆ ವಜ್ರದ ಮೌಲ್ಯದ ಮೇಲೆ ಶೇ. 20 ರವರೆಗೆ ಕಡಿತ ನೀಡಲಾಗುತ್ತದೆ. ಇದರೊಂದಿಗೆ ಎಲ್ಲಾ ಬಗೆಯ ಮೇನ್ ಡೈಮಂಡ್ ಆಭರಣಗಳ ಜಿಐಎ ಅಂಡ್ ಐಜಿಐ ಪ್ರಮಾಣೀಕೃತ ವಜ್ರಗಳು, ಗ್ಯಾರಂಟೀಡ್ ಬೈಬ್ಯಾಕ್, ಜೀವನ ಪರ್ಯಂತ ಖಚಿತ ಮೇಂಟೆನೆನ್ಸ್ (ನಿರ್ವಹಣೆ), ನಿಮ್ಮ ಆಭರಣವು ವಿಮೆಗೆ ಒಳಪಡುತ್ತದೆ ಹಾಗೂ ಜವಾಬ್ದಾರಿಯುತ ಮೂಲದ ಚಿನ್ನವಾಗಿದೆ ಎಂದು ಬೇಸಿಲ್ ರಾಜ್ (9845727916) ತಿಳಿಸಿದ್ದಾರೆ.

# 5500 ಲಕ್ಷ ಕೋಟಿ ರೂ. ಪರಿಹಾರವನ್ನು ಚೀನಾ ಭಾರತಕ್ಕೆ ನೀಡಲಿ : ಎಂ.ಎಸ್.ಕೆ. ಶಾಸ್ತ್ರಿ

ದಾವಣಗೆರೆ, ಅ.31- ಮಹಾಮಾರಿ ಕೊರೊನಾ ಇಡೀ ಭಾರತದಾದ್ಯಂತ ಹರಡಲು ಮತ್ತು ಲಕ್ಷಾಂತರ ಜನರ ಸಾವಿಗೆ ಕಾರಣವಾಗಿರುವ ಚೀನಾ ಭಾರತಕ್ಕೆ ಪರಿಹಾರವಾಗಿ 5500 ಲಕ್ಷ ಕೋಟಿ ರೂ.ಗಳನ್ನು ನೀಡುವಂತೆ ಕರ್ನಾಟಕ ಪ್ರದೇಶ ರೈತ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಒತ್ತಾಯಿಸಿದ್ದಾರೆ.

ಪ್ರಪಂಚವನ್ನೇ ತನ್ನ ಕಪಿಮುಷ್ಠಿಯಲ್ಲಿ ಇರಿಸಿಕೊಳ್ಳುವ ಕ್ರಿಮಿನಲ್ ಮನೋಭಾವವನ್ನು ಚೈನಾ ಹೊಂದಿದ್ದು, ಎಲ್ಲೆಡೆ ಕೊರೊನಾ ಹರಡಿ ಜನರ ಸಾವು-ನೋವುಗಳಿಗೆ ಕಾರಣವಾಗಿದ್ದು, ಪರಿಹಾರ ಕೊಡಿಸುವಂತೆ ದಿ ಹೇಗ್ ಪಟ್ಟಣದ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ನಿರ್ದೇಶಕ ಡಾ. ಟ್ರೆಡ್‌ದಾಸ್ ಐವಾನ್ ಇವರು ಚೀನಾ ಪರ ವಹಿಸದಂತೆ ಜಗತ್ತಿನಲ್ಲಿ ಮರಣ ಹೊಂದಿರುವ ಕೋಟ್ಯಂತರ ಜನರ ಮೇಲೆ ಸಹಾನುಭೂತಿ ತೋರಿಸುವಂತೆ ಶಾಸ್ತ್ರಿ ಮನವಿ ಮಾಡಿಕೊಂಡಿದ್ದಾರೆ.

# ಕನ್ನಡದಂತಹ ಮಧುರ ಭಾಷೆ ಜಗತ್ತಿನಲ್ಲಿ ಬೇರೆಲ್ಲೂ ಇಲ್ಲ



ನಾನು ಮೂಲತಃ ಸಾಹಿತ್ಯದ ವಿದ್ಯಾರ್ಥಿಯಲ್ಲ. ಆದರೆ ಅಪ್ಪಟ ಕನ್ನಡ ಭಾಷಾ ವಿದ್ಯಾರ್ಥಿ. ನನ್ನ ವಿದ್ಯಾಭ್ಯಾಸ ನಡೆದಿದ್ದು ಕನ್ನಡದಲ್ಲೆ. ನಾನೊಬ್ಬ ಅವಿಶ್ರಾಂತ ಕನ್ನಡದ ಓದುಗ. ಕನ್ನಡದ ಅನುಯಾಯಿ. ಕನ್ನಡದ ಕಟ್ಟಾಳು. ಕನ್ನಡವನ್ನೇ ಉಸಿರಾಡುವ ಸಂತ. ಕನ್ನಡ ಭಾಷೆ ನನ್ನ ಮೈಮನಗಳನ್ನು ಆವರಿಸಿಕೊಂಡಿದೆ. ಕನ್ನಡ ಬಿಟ್ಟು ಬದುಕು ಎಂದರೆ ಅದು ಅಸಾಧ್ಯವಾದ ಮಾತು. ನೀರಿನಿಂದ ಹೊರ ತೆಗೆದ ಮೀನು ಹೇಗೆ ಬದುಕುವುದಿಲ್ಲವೋ ಹಾಗೆ ಕನ್ನಡ ನುಡಿಯದ ಜೀವವೆಂದೂ ಉಳಿಯದು. ಅಷ್ಟು ಅಭಿಮಾನ.

ಆ ಅಭಿಮಾನ ಬಾಲ್ಯದಿಂದಲೇ ಬೆಳಿತಾ ಬೆಳಿತಾ ಓದುತ್ತಾ ಓದುತ್ತಾ ನನ್ನೊಳಗೆ ಇನ್ನೂ ಹೆಚ್ಚುತ್ತಾ ಹೋಯಿತು. ನನ್ನ ಬದುಕಿನಲ್ಲಿ ಇತರೆ ಭಾಷೆಗಳು ಬಂದಿದ್ದು ಆಮೇಲೆ. ಅದು ವ್ಯಾವಹಾರಿಕವಾಗಿ ಅಷ್ಟೆ. ದಕ್ಷಿಣ ಭಾರತದಿಂದ ಹಿಮಾಲಯದ ತನಕವಲ್ಲದೆ ಅನೇಕ ಪಾಶ್ಚಾತ್ಯ ದೇಶಗಳಿಗೆ ನಾನು ಹೋಗಿ ಬಂದಿದ್ದೇನೆ. ವ್ಯಾವಹಾರಿಕವಾಗಿ ಎಲ್ಲೆ ಸುತ್ತಾಡಿ ಬಂದರೂ ನನಗೆ ಆಪ್ತವೆನಿಸುವುದು ನನ್ನ ಮನೆ. ನನ್ನ ಭಾಷೆ. ನನ್ನ ಊರು. ನನ್ನ ಜನ.

ನನಗೆ ರಸಋಷಿ ಕುವೆಂಪು ಅವರ ಈ ಪದ್ಯ ಬಹಳ ಇಷ್ಟ. ಅದೆಷ್ಟೋ ಸಲ ಓದಿಕೊಂಡಿದ್ದೇನೆ. ಜೋರಾಗಿ ನಾನೊಬ್ಬನೇ ಓದಿಕೊಳ್ಳುತ್ತೇನೆ.

**ಕನ್ನಡ ಎನೆ ಕುಣಿದಾಡುವುದೆನ್ನೆದೆ,**
**ಕನ್ನಡ ಎನೆ ಕಿವಿ ನಿಮಿರುವುದು!**
**ಕಾಮನ ಬಿಲ್ಲನು ಕಾಣುವ ಕವಿಯೊಲು**
**ತೆಕ್ಕನೆ ಮನ**
**ಮೈಮರೆಯುವುದು.**

ಕುವೆಂಪು ಇಲ್ಲಿ ಬರಿಯುತ್ತಾರೆ, ಹರಿ ಹರಾದಿಗಳಿಗೂ ಕನ್ನಡವೆಂದರೆ ಅಚ್ಚುಮೆಚ್ಚು. ಅವ ರನ್ನ ಕನ್ನಡದಲ್ಲೇ ಸಂಪನ್ನಿಸಿದರೆ ವರ ಕೊಡುತ್ತಾನೆ. ನಮ್ಮನ್ನೆಲ್ಲಾ ಪೊರೆಯುತ್ತಾನೆ ಅಂತ. ಅಂದರೆ ಕನ್ನಡ ದೇವಾನು ದೇವತೆಗಳಿಗೂ ಪ್ರಿಯವಾದ ಭಾಷೆ. ಚೆಂದವಾದ ಭಾಷೆ. ಮನಸಿಗೆ ಹತ್ತಿರವಾದ ಭಾಷೆ. ದೇವಭಾಷೆ. ಇಷ್ಟು ಮಧುರವಾದ, ಭವ್ಯವಾದ, ಹೃದಯಕ್ಕೆ ಹತ್ತಿರವಾದ ಇನ್ನೊಂದು ಭಾಷೆ ಜಗತ್ತಿನಲ್ಲಿ ಇದೆಯಾ? ಬಹುಶಃ ಇಲ್ಲ.

ನಾನು ಹರಿಹರರನ್ನು ನಂಬುತ್ತೇನೆ. ಪೂಜಿಸುತ್ತೇನೆ. ಹಾಗೆ ಕನ್ನಡವೂ ನನಗೆ ಪೂಜನೀಯ. ಇಂದು ಕನ್ನಡ ರಾಜ್ಯೋತ್ಸವ ದಿನ. ಕನ್ನಡ ಸಮೃದ್ಧವಾಗಿ ಬೆಳೆಯಲು ಅನೇಕ ಮಹನೀಯರು ದುಡಿದಿದ್ದಾರೆ. ನಾಡು ಕಟ್ಟುವಲ್ಲಿ ಜೀವ ನೀಡಿದ್ದಾರೆ.

ಅವರೆಲ್ಲರಿಗೂ ನನ್ನ ನಮಸ್ಕಾರಗಳು. ಎಲ್ಲರಿಗೂ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ.

**- ಶ್ರೀ ವಚನಾನಂದ ಸ್ವಾಮೀಜಿ.**
ಜಗದ್ಗುರುಗಳು, ಪಂಚಮಸಾಲಿ ಜಗದ್ಗುರು
ಪೀಠ, ಹರಿಹರ.

# ಶಿವಮೂರ್ತಿ ಮುರುಘಾ ಶರಣರಿಗೆ ಗೌರವಾರ್ಪಣೆ




ದಾವಣಗೆರೆ,ಅ.31- ಚಿತ್ರದುರ್ಗದ ಮುರುಘಾ ಮಠದಲ್ಲಿ ದಸರಾ ಮಹೋತ್ಸವದ ಸಂದರ್ಭದಲ್ಲಿ ಮೊನ್ನೆ ನಡೆದ ಶರಣ ಸಂಸ್ಕೃತಿ ಉತ್ಸವದ ಕಾರ್ಯಕ್ರಮದಲ್ಲಿ ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರನ್ನು ಗೌರವಿಸಲಾಯಿತು.

ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ, ಟ್ರಸ್ಟ್ ಕಾರ್ಯದರ್ಶಿ ಎಂ. ಜಯಕುಮಾರ್, ಜಂಟಿ ಕಾರ್ಯದರ್ಶಿ ಎಸ್. ಓಂಕಾರಪ್ಪ, ಟ್ರಸ್ಟಿಗಳಾದ ಕಣಕುಪ್ಪಿ ಮುರುಗೇಶಪ್ಪ, ಚನ್ನಪ್ಪ ಮತ್ತಿತರರು ಶರಣರನ್ನು ಸನ್ಮಾನಿಸಿದರು.

# ಬಸವಣ್ಣನ ತತ್ವದಂತೆ ಬದುಕಿ ಬಾಳಿದವರು ಮಾಗನೂರು ಬಸಪ್ಪ

**ಸಾಧನೆ ಇಲ್ಲದೇ ಸತ್ತರೆ ಸಾವಿಗೆ ಅವಮಾನ ...**
**ಆದರ್ಶವಿಲ್ಲದೇ ಬದುಕಿದರೆ**
**ಬದುಕಿಗೆ ಅವಮಾನ ...**



**ಮಾಗನೂರು ಬಸಪ್ಪನವರ ನೆನಪು ಮಾಸುವ ಮುನ್ನವೇ ಅವರ ಬದುಕಿನ ಕೆಲವು ನೆನಪುಗಳನ್ನು, ಅವರೊಂದಿಗಿನ ಅನುಭವಗಳನ್ನು ಕೃತಿ ರೂಪದಲ್ಲಿ ಹೊರ ತರುವ ಕಾರ್ಯ ಇದೀಗ ಮುಕ್ತಾಯದ ಹಂತದಲ್ಲಿದೆ. ಈ ಹಿನ್ನೆಲೆಯಲ್ಲಿ ಮಾಗನೂರು ಬಸಪ್ಪನವರ 25ನೇ ಪುಣ್ಯಸ್ಮರಣೆಯ ಸ್ಮರಣಾರ್ಥ ಪ್ರಕಟಗೊಳ್ಳಲಿರುವ 'ಸಂಸ್ಮರಣಾ ಗ್ರಂಥ'ವು ಮೌಲಿಕ ಲೇಖನ ಗಳೊಂದಿಗೆ ಸಂಗ್ರಹ ಯೋಗ್ಯ ಗ್ರಂಥವಾಗಿ ಹೊರಬರಲಿದೆ.**

ಆರೂಢ ದಾಸೋಹಿ, ದಾನ ಚಿಂತಾಮಣಿ, ಅನುಪಮ ದಾನಿ, ಮಹಾಶರಣ ಲಿಂಗೈಕ್ಯ ಮಾಗನೂರು ಬಸಪ್ಪನವರು - ಸಾಧನೆ ಮತ್ತು ಆದರ್ಶ ಈ ಎರಡನ್ನೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ವರಾಗಿದ್ದರು.

ಲಿಂಗಪೂಜೆ-ಜಂಗಮ ದಾಸೋಹ ಪರಿಕಲ್ಪನೆ ಗಳು ವ್ಯಕ್ತಿ ಕಲ್ಯಾಣ ಮತ್ತು ಲೋಕಕಲ್ಯಾಣಕ್ಕೆ ಅಗತ್ಯವಾದ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ.

ಲಿಂಗ ಪೂಜೆಯಿಂದ ಆತ್ಮೋದ್ಧಾರ ಮಾಡಿಕೊಳ್ಳಬೇಕು. ಜಂಗಮ ದಾಸೋಹದ ಮೂಲಕ ಆತ್ಮೋದ್ಧಾರದ ಶಕ್ತಿಯನ್ನು ಲೋಕಕಲ್ಯಾಣಕ್ಕೆ ಬಳಸಬೇಕು. ಅದಕ್ಕಾಗಿಯೇ ಬಸವಣ್ಣನವರು "ಎನ್ನ ಲಿಂಗ ವ್ಯಸನಿ ಜಂಗಮ ಪ್ರೇಮಿ ಎಂದೆನಿಸಯ್ಯಾ" ಎಂದು ಪ್ರಾರ್ಥಿಸುತ್ತಾರೆ.

ಹೀಗೆ ಲಿಂಗ ವ್ಯಸನಿ ಜಂಗಮ ಪ್ರೇಮಿಯಾದ ವರು ಅಪರೂಪ. ಅಂತಹ ಅಪರೂಪದವರಲ್ಲಿ ಶರಣ ಮಾಗನೂರು ಬಸಪ್ಪನವರೂ ಒಬ್ಬರು. ಆರೂಢ ದಾಸೋಹಿ, ಧರ್ಮ ಚಿಂತಾಮಣಿ ಎಂದೇ ಜನಮಾನಸದಲ್ಲಿ ನೆಲೆನಿಂತಿರುವ ಬಸಪ್ಪನವರು ಬಸವಣ್ಣನವರ ತತ್ವಗಳಂತೆ ಬದುಕಿ ತೋರಿಸಿದವರು.

ಸಿರಿಗೆರೆ ತರಳಬಾಳು ಬೃಹನ್ಮಠದ ಹಿರಿಯ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ನಡೆದವರು. ಜಾತ್ಯತೀತವಾಗಿ ದಾವಣಗೆರೆಯಲ್ಲಿ ಎಲ್ಲ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಅಭ್ಯುದಯಕ್ಕೆ ನೆರವಾದವರು.

ಕಡು ಬಡತನದಲ್ಲಿ ಹುಟ್ಟಿ ಬೆಳೆದ ಈ ಜೀವ, ಹುಟ್ಟಿದ ಕೆಲವೇ ತಿಂಗಳುಗಳಲ್ಲಿ ತಾಯಿಯನ್ನು, 13ನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡಿತು. ನಂತರ ಬದುಕು ಕಟ್ಟಿಕೊಳ್ಳಲು ಆಯ್ಕೆ ಮಾಡಿಕೊಂಡಿದ್ದು ದಾವಣಗೆರೆಯನ್ನು. ವಿವಿಧ ಅಂಗಡಿಗಳಲ್ಲಿ ಗುಮಾಸ್ತ ಕೆಲಸ ಮಾಡಿ ಅದರಿಂದ ಬಂದ ಅಲ್ಪ ಹಣದಲ್ಲಿಯೇ ಉಳಿತಾಯ ಮಾಡಿ, ಚತುರತೆಯಿಂದ ಮುಂದೆ ಬಂದ ಬಸಪ್ಪ ನವರ ವಿದ್ಯಾಭ್ಯಾಸ ಕೇವಲ 7ನೇ ತರಗತಿ. ಬದುಕಿನ ರಂಗವೇ ಅವರ ಪಾಠಶಾಲೆ. ಅವರ ಜೀವನದ ಅನುಭವವೇ ಅವರಿಗೆ ದೊಡ್ಡ ಪಾಠವಾಗಿತ್ತು.


ಸಾರ್ವಜನಿಕರ ಹಣವಾಗಲೀ, ಸ್ವತ್ತಾಗಲೀ ಒಂದು ಕವಡೆಯಷ್ಟೂ ತನ್ನ ಮನೆಗೆ ಸೇರಬಾರದು ಎಂದು ಹಂಬಲಿಸಿದ ಮಾಗನೂರು ಬಸಪ್ಪ ಅವರು ಜೀವನದಲ್ಲಿ ಗಳಿಸಿದ್ದ ಸಂಪತ್ತು ಕೇವಲ ಲೌಕಿಕವಾದುದ್ದಲ್ಲ, ಅಲೌಕಿಕವಾದದ್ದು. ಒಬ್ಬ ತತ್ವಜ್ಞಾನಿಗೆ ಇರಬೇಕಾದ ಸ್ಪಷ್ಟತೆ, ನೈಜತೆ, ನಿಖರತೆ, ಶಿಸ್ತು, ಸಂಪನ್ನತೆ, ಸಂಸ್ಕಾರ, ಸಂಸ್ಕೃತಿ ಅವರ ರಕ್ತದಲ್ಲಿ ಬೆರೆತು ಹೋಗಿದ್ದವು.

ಯಾವ ಡಿಗ್ರಿಯನ್ನು ಸಂಪಾದಿಸದೇ ಬರೀ ಬದುಕಿನ ಪಾಠದಿಂದ ಪಡೆದ ದಿವ್ಯ ಅರಿವಿನಿಂದ ದೈವ ಮಾನವತ್ವ ಪಡೆದ ಈ ವಿವೇಕದ ವ್ಯಕ್ತಿತ್ವಕ್ಕೆ ಪುಣ್ಯಸ್ಮರಣೆಯ ದಿನದಂದು ಶ್ರದ್ಧಾಂಜಲಿ ಅರ್ಪಿಸಿದರೆ ಸಾಲದು, ಅವರ ಬದುಕಿದ ತತ್ವಾದರ್ಶಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಸಮಾಜಕ್ಕೆ ನೀಡುವಂತಾಗಲು ನಮ್ಮ ವಿಶ್ವವಿದ್ಯಾಲಯಗಳು ಪಠ್ಯವಸ್ತುವಿನ ರೂಪದಲ್ಲಿ ತಿಳಿಸುವ ಪ್ರಯತ್ನ ಮಾಡಬೇಕಿದೆ.

**- ಡಾ. ಅನಿತಾ ಹೆಚ್. ದೊಡ್ಡಗೌಡರ್,**
ಸಹಾಯಕ ಪ್ರಾಧ್ಯಾಪಕರು,
ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ
ಮಹಾವಿದ್ಯಾಲಯ,
ದಾವಣಗೆರೆ. ಮೊ : 9902198655

## ಪದವಾಣಿ-05

ರಚನೆ : ನಾಗರಾಜು ಗೊಡಬನಹಾಳ್




**ಎಡದಿಂದ ಬಲಕ್ಕೆ :**

| | |
|---|---|
| 1) ಕೃಷ್ಣಪಕ್ಷದ ಕಡೆಯ ದಿನ | 4 |
| 3) ದಾವಣಗೆರೆಯ ಕೊಡುಗೈದಾನಿ ಶಿವಶಂಕರಪ್ಪನವರ ಊರು | 4 |
| 5) ಕಾಂತಿಯಿಂದ ಕಂಗೊಳಿಸುವ ಅರಮನೆ | 3 |
| 6) ಗಿಡಬಳ್ಳಿಗಳು ಚಿಗುರುವ ಸಿಹಿಯಂತಹ ವಸಂತ ಋತು | 4 |
| 8) ಕೆಲವು ಮನೆಗಳನ್ನೊಳಗೊಂಡ ಆವಾರ | 3 |
| 9) ದೋಷದ ಸಮಾನಾರ್ಥಕ ಪದ | 2 |
| 10) ಹರ, ಅರಸ, ಮಗ ಒಂದಾಗಿರುವ ಒಬ್ಬ ನಾಯಕ ನಟ | 7 |
| 12) ಮಾತು ಬಾರದವನು | 2 |
| 14) ಬ್ರಹ್ಮ-ವಿಷ್ಣು-ಮಹೇಶ್ವರ | 3 |
| 16) ಅಡವಿಯ ಸಮಾನಾರ್ಥಕ ಪದ | 3 |
| 17) ದಾವಣಗೆರೆಯ ಮಹಾದಾನಿ ಬಸಪ್ಪನವರ ಊರು | 4 |
| 18) ನರಕ ಲೋಕದಲ್ಲಿ ಶಿಕ್ಷೆ ಕೊಡುವ ಸ್ಥಳ | 4 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ಕಬ್ಬಿಣದಂತೆ ಬಹಳ ಕಠಿಣವಾದುದು | 4 |
| 2) ಬಿಡಿಸಲಾಗದ ಕಷ್ಟದ ಒಗಟು ತಲೆಕೆಳಗಾಗಿದೆ | 3 |
| 3) ಉಣ್ಣೆಯಿಂದ ಮಾಡಿದ ಹೊದಿಕೆ | 2 |
| 4) ಮೂರಕ್ಷರದ ರಕ್ತ | 3 |
| 7) ವಿಷ್ಣುವಿನ ಪ್ರತಿಮೆ ಪುರುಷ ನಾಮವಾಗಿದೆ | 5 |
| 8) ಮಾನವನಂತೆ ಕಾಣುವ ಕೋತಿ | 5 |
| 9) ದೂಡು, ದಬ್ಬು | |
| 11) ಸಂಗೀತದ ಸ್ವರಲಾಪ | 2 |
| 13) ಕೊನೆಗೆ ದುರ್ಗೆಯುಳ್ಳ ಮೊಂಡುತನದವನು | 4 |
| 14) ಮೂರು ಜಾವಗಳ ರಾತ್ರಿ | 3 |
| 15) ಸೌಜನ್ಯದಿಂದ ಕೂಡಿದ ಒಳ್ಳೆಯ ನಡತೆ | 3 |
| 16) ವಾಂತಿಮಾಡು, ಕಕ್ಕು. | 2 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 04ರ ಉತ್ತರಗಳು :**

ಎಡದಿಂದ ಬಲಕ್ಕೆ : 1) ಮಧುಚಂದ್ರ 3) ಬಂಧಿಖಾನೆ 5) ಡಮರು 7) ರಭಸ 9) ಇಂಧನ 10) ಜನಾನುರಾಗಿ 11) ನಯನ 12) ತಕಾವಿ 14) ಪ್ರವರ 16) ಜಲಮಯ 17) ಕಲಿಯುಗ.

ಮೇಲಿನಿಂದ ಕೆಳಕ್ಕೆ : 1) ಮನ್ವಂತರ 2) ದ್ರಾವಿಡ 3) ಬಂಜರು 4) ನೆಂಟಸ್ತನ 6) ಮಹಾನುಭಾವ 8) ಸಜನ 9) ಇಂಗಿತ 11) ನಟರಾಜ 13) ವಿಕಲಾಂಗ 14) ಪ್ರಣಯ 15) ರಸಿಕ

# ಸೋರಿಯಾಸಿಸ್ : ಚಿಂತೆ ಬೇಡ, ಚಿಂತನೆ ಮಾಡಿ

ಪ್ರತಿ ವರ್ಷದಂತೆ ಸೋರಿಯಾಸಿಸ್ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಸಲುವಾಗಿ 'PSORIASIS BE INFORMED' ಎಂಬ ಘೋಷವಾಕ್ಯದೊಂ ದಿಗೆ ಅಕ್ಟೋಬರ್ 29 ರಂದು ವಿಶ್ವ ಸೋರಿಯಾಸಿಸ್ ದಿನ ಹಮ್ಮಿಕೊಳ್ಳುತ್ತೇವೆ.

ಸೋರಿಯಾಸಿಸ್ ಒಂದು ದೀರ್ಘಕಾಲಿಕ ಅಸಾಂಕ್ರಾಮಿಕ ಚರ್ಮರೋಗವಾಗಿದ್ದು, ಚರ್ಮದ ಮೇಲಿನ ಪದರು ಅತಿಯಾಗಿ ಉತ್ಪಾದಿಸುವುದು. ಪ್ರಪಂಚದ ಶೇ.1 ರಿಂದ 3 ಪ್ರತಿಶತ ಜನರಲ್ಲಿ ಕಾಣಿಸಿಕೊಂಡಿದೆ.

ಸೋರಿಯಾಸಿಸ್‌ಗೆ ಅನೇಕ ಕಾರಣಗಳು ಇದ್ದು, ಅದರಲ್ಲಿ ಪ್ರಮುಖವಾಗಿ ಆತ್ಮಘಾತಿ ಪ್ರಕ್ರಿಯೆ (auto-immune disorder), ಕೆಲವು ಸೋಂಕುಗಳು (streptococcal), ಗುಟ್ಟೇಟ ಸೋರಿಯಾಸಿಸ್ ಮತ್ತು ಸೋರಿಯಾಟಿಕ್ ಆರ್ಥ್ರೈಟಿಸ್‌ಗೆ ಹಲವಾರು ಕಾರಣಗಳಿದ್ದು, ಅದರಲ್ಲಿ ಅನುವಂಶೀಯತೆ ಕೂಡ ಒಂದು.

ಚರ್ಮದ ತಳ ಪದರುಗಳ ಜೀವಕೋಶ ವಿಪರೀತ ವಿಭಜನೆಯಾಗುವುದು. ಸಾಮಾನ್ಯವಾಗಿ 28 ರಿಂದ 30 ದಿನ ತೆಗೆದುಕೊಳ್ಳುವ ಪ್ರಕ್ರಿಯೆ ಇದರಲ್ಲಿ 3 ರಿಂದ 6 ದಿನಕ್ಕೆ ಮುಗಿಯುತ್ತದೆ.

ಸೋರಿಯಾಸಿಸ್ ಇರುವ ರೋಗಿಗಳಲ್ಲಿ ರೋಗದ ಲಕ್ಷಣ ಹೆಚ್ಚಾಗಲು ಅನೇಕ ಕಾರಣಗಳಿದ್ದು, ಪ್ರಮುಖವಾಗಿ ಚಳಿಗಾಲದಲ್ಲಿ ಈ ಬಾಧೆ ಹೆಚ್ಚಾಗುವ ಸಾಧ್ಯತೆಗಳಿವೆ. ಧೂಮಪಾನ ಮತ್ತು ಮದ್ಯಪಾನ ಮಾಡುವುದರಿಂದ, ಮಾನಸಿಕ ಮತ್ತು ದೈಹಿಕ ಒತ್ತಡ, ಕೆಲವೊಂದು ರೀತಿಯ ಔಷಧಿಗಳಾದ ಐಬುಪ್ರೊಫೇನ್ (ನೋವು ನಿವಾರಕ), ಬೀಟಾ-ಬ್ಲಾಕರ್‌ಗಳು (ರಕ್ತದೊತ್ತಡಕ್ಕಾಗಿ ಔಷಧ) ಮತ್ತು ಹೈಡ್ರಾಕ್ಸಿಕ್ಲೋರೋಕ್ವಿನ್ (ಮಲೇರಿಯಾ-ವಿರೋಧಿ) ರೋಗದ ಲಕ್ಷಣಗಳು ಉಲ್ಬಣವಾಗುವ ಸಾಧ್ಯತೆಗಳಿವೆ. ಮಧುಮೇಹ ರೋಗ (ನಿಯಂತ್ರಣವಿಲ್ಲದ ಬ್ಲಡ್ ಶುಗರ್ ಲೆವೆಲ್), ಗಾಯವಾದ ಜಾಗದಲ್ಲಿ ಹರಡುವ ಸಂಭವವಿದೆ.

ಸೋರಿಯಾಸಿಸ್ ರೋಗದ ಪ್ರಾಥಮಿಕ ಲಕ್ಷಣಗಳು - ತುರಿಕೆಯ ಉರಿಯೂತದ ಕೆಂಪು ಬಣ್ಣದ ದದ್ದುಗಳ ಮೇಲೆ ಬೆಳ್ಳಿ ಬಣ್ಣದ ಪದರು ಕಾಣಿಸುತ್ತದೆ. ಇವು ಸಾಮಾನ್ಯವಾಗಿ ಮೊಣಕೈ, ಮೊಣಕಾಲು, ಬೆನ್ನು, ಪಾದ ಮತ್ತು ಅಂಗೈ, ತಲೆ ಬುರುಡೆಯಲ್ಲಿ ಕಾಣಿಸಿಕೊಳ್ಳುತ್ತವೆ. ಕೆಲವು ಲಕ್ಷಣಗಳು ಉಗುರುಗಳಲ್ಲಿ ಕೂಡ ಕಾಣಬಹುದು. ಚರ್ಮ ರೋಗದ ಜೊತೆ ಕೀಲುಗಳ ಮೇಲೆ ಪ್ರಭಾವ ಬೀರುತ್ತದೆ. ಅದಕ್ಕೆ ಸೋರಿಯಾಟಿಕ್ ಆರ್ಥ್ರೈಟಿಸ್ ಎಂದು ಕರೆಯುತ್ತಾರೆ.



ಸೋರಿಯಾಸಿಸ್ ವಿಧಗಳು ಅದರಲ್ಲಿ ಗುಟ್ಟೇಟ್ ಸೋರಿಯಾಸಿಸ್ : ಬಾಲ್ಯದಲ್ಲಿ ಹದಿಹರೆಯದಲ್ಲೇ ಇದು ಆರಂಭವಾಗು ವುದು. ಇದರಲ್ಲಿ ತುಂಬಾ ಸಣ್ಣ ಕೆಂಪು ದದ್ದು ಕಾಣಿಸುವುದು. ಪಸ್ಚುಲರ್ ಸೋರಿಯಾ ಸಿಸ್, ವಿಲೋಮಾ ಸೋರಿಯಾಸಿಸ್ (inverse psoriasis) ಮತ್ತು ಎರಿಥ್ರೋ ಡರ್ಮಿಕ್ ಸೋರಿಯಾಸಿಸ್ ಮುಂತಾದವು ಗಳು ಸೋರಿಯಾಸಿಸ್‌ನ ವಿಧಗಳು.

ಸೋರಿಯಾಸಿಸ್‌ನಿಂದಾಗಿ ಆಗುವ ದುಷ್ಪರಿಣಾಮಗಳು -

ಸೋರಿಯಾಸಿಸ್ ಸಂಧಿವಾತ, ವಿಟಮಿನ್ ಮತ್ತು ಲವಣಗಳ ಲೋಪ, ಮಾನಸಿಕ ಖಿನ್ನತೆ ಉಂಟಾಗುವ ಸಾಧ್ಯತೆಗಳಿವೆ.

ಸೋರಿಯಾಸಿಸ್ ರೋಗಕ್ಕೆ ತುತ್ತಾಗಿದ್ದರೆ, ಪಾಲಿಸಬೇಕಾದ ಕ್ರಮಗಳು : 1.ನಿಮ್ಮ ಚರ್ಮವನ್ನು ತೇವವಾಗಿಡಲು ಬೆಚ್ಚಗಿನ ನೀರಿನಿಂದ ಸ್ನಾನ ಮಾಡಿ.

2. ಸ್ನಾನ ಮಾಡಿದ ಬಳಿಕ ತ್ವಚೆಯ ಮೇಲೆ ಲಿಕ್ವಿಡ್ ಪ್ಯಾರಾಫಿನ್ (liquid paraffin) ಅಥವಾ ಮಾಯ್ಸ್‌ರೈಸಿಂಗ್ ಕ್ರಿಮ್ ಅಥವಾ ಲೋಷನ್ (moisturizering cream or lotion) ಹಚ್ಚಿ,

3. ರೋಗ ಬಾಧಿತ ದೇಹದ ಭಾಗವನ್ನು ಬಿಸಿಲಿಗೆ ಮೈಯೊಡ್ಡಿ

### ವಿಶ್ವ ಸೋರಿಯಾಸಿಸ್ ದಿನ

4. ಸೋರಿಯಾಸಿಸ್‌ನಿಂದ ಖಿನ್ನತೆ, ಬೇಸರ ಮತ್ತು ಪ್ರತ್ಯೇಕತೆಯ ಭಾವನೆಗಳು ಬಂದಲ್ಲಿ ಇದರ ಬಗ್ಗೆ ಕುಟುಂಬದ ಜೊತೆ, ಸ್ನೇಹಿತರ ಅಥವಾ ವೈದರ ಜೊತೆ ಚರ್ಚಿಸಿ ಸಲಹೆ ಪಡಯಬೇಕು.

5. ಸಾಕಷ್ಟು ನೀರು ಕುಡಿಯಬೇಕು. ಧೂಮಪಾನ ಮತ್ತು ಮದ್ಯಪಾನ ತ್ಯಜಿಸಬೇಕು.

6. ದಿನನಿತ್ಯ ವ್ಯಾಯಾಮ, ಯೋಗಾಸನ ಮತ್ತು ಧ್ಯಾನ, ಪ್ರಾಣಾಯಾಮ ಮಾಡಬೇಕು. ದೇಹದ ತೂಕ ಕಡಿಮೆ ಮಾಡಿಕೊಳ್ಳುವುದು ಮತ್ತು ಗಡಿಬಿಡಿಯ ಜೀವನ ಶೈಲಿ ಬದಲಾಯಿಸಬೇಕು. ವೈದರ ಸಲಹೆ ಪಡೆಯಬೇಕು ಮತ್ತು ಪಾಲಿಸಬೇಕು.

ರೋಗಿಗಳು ಕೆಲವು ತಪ್ಪುಗಳನ್ನು ಮಾಡುತ್ತಾರೆ ಅವುಗಳೆಂದರೆ

ಕೆಂಪು ದದ್ದುಗಳನ್ನು ಉಜ್ಜುವುದು, ಗಿರುಗಳನ್ನು ಕೀಳಲು ಪ್ರಯತ್ನಿಸುವುದು, ಜಾಸ್ತಿ ಆಯಾಸ ಮಾಡಿಕೊಳ್ಳುವುದು, ರೋಗದ ಬಗ್ಗೆ ನಿರ್ಲಕ್ಷ್ಯ ತೋರುವುದು, ಮಾನಸಿಕವಾಗಿ ಕುಗ್ಗುವುದು ವೈದ್ಯರ ಸಲಹೆ ಪಡೆಯದೇ ಔಷಧಿ ಉಪಯೋಗಿಸುವುದು.

ಸೋರಿಯಾಸಿಸ್ ಬಗ್ಗೆ ಜನರಲ್ಲಿ ತುಂಬಾ ಅಪನಂಬಿಕೆಗಳಿವೆ. ಅವುಗಳೆಂದರೆ ಇದು ಸಾಂಕ್ರಾಮಿಕ ರೋಗ ಎನ್ನುವುದು.

ಬಿಸಿಲಿಗೆ ಹೋಗಬಾರದು, ಕಳೆದ ಜನ್ಮದ ಪಾಪದಿಂದ ಬರುತ್ತೆ. ಈ ಕಾಯಿಲೆಗೆ ಚಿಕಿತ್ಸೆ ಇಲ್ಲ. ಇವುಗಳನ್ನೆಲ್ಲಾ ಮೆಟ್ಟಿನಿಂತಾಗ ಮಾತ್ರ ನಾವು ಈ ರೋಗವನ್ನು ಗುಣಪಡಿಸಲು ಸಾಧ್ಯ.

ಸೋರಿಯಾಸಿಸ್ ಕಾಯಿಲೆಗೆ ಅನೇಕ ರೀತಿಯ ಚಿಕಿತ್ಸೆಗಳು ಇದ್ದು, ರೋಗಿಗಳು ಅದರ ಸದುಪಯೋಗ ಪಡೆದುಕೊಳ್ಳಬೇಕು. ಈ ರೋಗ ಚಿಕ್ಕ ಮಕ್ಕಳಲ್ಲಿ, ಗರ್ಭದಲ್ಲಿರುವ ಸ್ತ್ರೀಯರಿಗೆ ಮತ್ತು ಹಿರಿಯರಿಗೆ ಬಂದರು ಕೂಡ ಚಿಕತ್ಸೆ ಇದೆ.

ಸೀಮಿತವಾದ ಕಾಯಿಲೆಗೆ ಪ್ರತಿರೋಧಕ ಶಕ್ತಿ ಇರುವ ಅನೇಕ ಮುಲಾಮುಗಳಿವೆ (ಸ್ಟಿರಾಯ್ಡ್, ಟ್ಯಾಕ್ರೋಲಿಮಸ್, ವಿಟಮಿನ್ 'ಎ' ಮತ್ತು 'ಡಿ' ಉತ್ಪನ್ನಗಳು)

ತೀವ್ರ ಸೋರಿಯಾಸಿಸ್ ಕಾಯಿಲೆಗೆ ರೋಗ ಪ್ರತಿರೋಧಕ ಉಳ್ಳ ಮಾತ್ರೆಗಳು ಮತ್ತು ಇಂಜೆಕ್ಷನ್‌ಗಳಿವೆ. ಉದಾರಣೆಗೆ ಮೆಥೊಟ್ರೆಕ್ಸೇಟ್ (methotrexate), ಸೈಕ್ಲೋಸ್ಪೋರ್ನ್, (cyclosporine) ಮತ್ತು ಅಜಥಿಪ್ರೈನ್ (azathioprine), ಅಪ್ರೆಮಿಲಾಸ್ಟ್ (apremilast) ಮುಂತಾದವುಗಳನ್ನು ಬಳಸಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಹೊಸದಾಗಿ ಜೈವಿಕ ಪ್ರತಿರೋಧಕ ಶಕ್ತಿಯುಳ್ಳ ಇಂಜೆಕ್ಷನ್ ಬಳಸಲಾಗುತ್ತದೆ.

ಇದರ ಜೊತೆಗೆ ನೀಲಾತಿತ ಬೆಳಕಿನ ಕಿರಣಗಳ ಚಿಕಿತ್ಸೆ (Phototherphy) ಮತ್ತು ಎಕ್ಸೈಮರ್ ಲೇಸರ್ ಕಿರಣ್ ಚಿಕಿತ್ಸೆ (Eximer laser) ಕೂಡ ಇದೆ. ಮೇಲಿನ ಎಲ್ಲಾ ಚಿಕಿತ್ಸೆಗಳನ್ನು ವೈದ್ಯರ ಸಲಹೆ ಮೇರೆಗೆ ಮಾತ್ರ ಪಡೆಯಬೇಕು.

ಸೋರಿಯಾಸಿಸ್ ಸಂಧಿವಾತಕ್ಕೆ ನಿಯಮಿತವಾಗಿ ವ್ಯಾಯಾಮ ಮತ್ತು ಚಿಕಿತ್ಸೆ ಪಡೆದುಕೊಳ್ಳಬೇಕು.

ಸೋರಿಯಾಸಿಸ್ ಸಾಂಕ್ರಾಮಿಕ ರೋಗವಲ್ಲ. ರೋಗದ ಪ್ರಾಥಮಿಕ ಲಕ್ಷಣಗಳು ಕಂಡುಬಂದಲ್ಲಿ ಚರ್ಮ ವೈದ್ಯರಲ್ಲಿಗೆ ಭೇಟಿ ನೀಡಿ ಮತ್ತು ಚಿಕಿತ್ಸೆ ಪಡೆಯರಿ. ಸೋರಿಯಾಸಿಸ್ ಒಪ್ಪಿಕೊಳ್ಳಿ, ಜೀವನ ಅಪ್ಪಿಕೊಳ್ಳಿ. ನಿಮ್ಮ ತ್ವಚೆ ನಿಮ್ಮ ಸಂಪತ್ತು.



**ಡಾ. ಸೂಗಾರೆಡ್ಡಿ,**
ಚರ್ಮ ರೋಗ ವಿಭಾಗದ ಮುಖ್ಯಸ್ಥರು, ಜಜಮು ವೈದ್ಯಕೀಯ ಕಾಲೇಜು, ದಾವಣಗೆರೆ.
ಮೊ. 94482-51468

**ಡಾ. ಪರಮೇಶ್ವರ,** ಸ್ನಾತಕೋತ್ತರ ವಿದ್ಯಾರ್ಥಿ, ಚರ್ಮ ರೋಗ ವಿಭಾಗ, ಜಜಮು ವೈದ್ಯಕೀಯ ಕಾಲೇಜು, ದಾವಣಗೆರೆ.

# ಕನ್ನಡಿಗರೇ ಏಳಿ ! ಎದ್ದೇಳಿ ! ಜಾಗೃತರಾಗೋಣ

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ,ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದು ಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ, ಆಘಾತಗಳು, ಮೈಯುಂಡ ಬಾಳು, ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದು ವಚನ, ನುಡಿ ಟಠಡಢಣ. ಮಾತು ಜ್ಯೋತಿರ್ಲಿಂಗ, ಹಲಗೆ ಬಳಪದ ಪಡಿಯದೊಂದಗ್ಗಳಿಕೆಯಲ್ಲಿ ಬಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿ ಸಾಧಕರ ಮಾರ್ಗ ದೇಸಿಗಳ ಸಮಾಹಿತದಲ್ಲಿ ತಮಗೆದುರಾದ ಆತಂಕ, ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ, ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕ ವಾದುದು. ಈ ಭಯಾನಕತೆಯನ್ನು ಎದುರಿ ಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯಗಳಿಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾ ವಿಶೇಷ.

ವಿಜ್ಞಾನದ ಹೊಸ ಹೊಸ ಆವಿಷ್ಕಾರ ಗಳಿಗೆ ಪ್ರತಿಸ್ಪಂದಿಸುತ್ತಾ, ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ.



ವೈಜ್ಞಾನಿಕ ವಿಚಾರ ಸೃಜನಶೀಲ ಭಾವದಲ್ಲಿ ಅಭಿವ್ಯಕ್ತಗೊಂಡಾಗ, ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸ ಕಾಲದ ಸಂವೇದನೆಗಳಿಗೆ, ವೈಜ್ಞಾನಿಕ ವಿಚಾರಗಳಿಗೆ, ತಾತ್ವಿಕ ತರ್ಕ-ದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಮ ಗುಣ ಜೀವಂತ ಭಾಷೆಯೊಂದರ ದೊಡ್ಡ ಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ, ನಮ್ಮ ಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತಾರಗೊಳ್ಳುತ್ತಿರುವ ಎಲ್ಲ ಜ್ಞಾನ ಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ ತನ್ಮೂಲಕ ವಿಷಯ ಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ.

**ಅಲ್ಲಮ ಪ್ರಭುವಿನ ವಚನ ಹೀಗಿದೆ -**

***ಹಿಂದಣ ಅನಂತವನು ಮುಂದಣ ಅನಂತವನು***
***ಒಂದು ದಿನ ಒಳಕೊಂಡಿತ್ತು ನೋಡಾ***
***ಒಂದು ದಿನವನೊಳಕೊಂಡು***
***ಮಾತಾಡುವ ಮಹಾಂತನ***
***ಕಂಡು ಬಲ್ಲವರಾರಯ್ಯ***
***ಆದ್ಯರು ವೇದ್ಯರು ಅನಂತರ ಹಿರಿಯರು***
***ಕಾಲದಂತುವನರಿಯದೆ***
***ಅಂತೆ ಹೋದರು ಕಾಣಾ ಗುಹೇಶ್ವರ !***

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ.

ಕರ್ನಾಟಕ ಏಕೀಕರಣಗೊಂಡು 65 ವರ್ಷಗಳು ತುಂಬುತ್ತಿವೆ. ನಾಡು ಸಂಭ್ರಮವನ್ನು ಆಚರಿಸುತ್ತಿದೆ. ಈ 65 ವರ್ಷಗಳಲ್ಲಿ ಕನ್ನಡ ನಾಡು ಸಾಧಿಸಿರುವ ಪ್ರಗತಿ, ಎದುರಿಸಿರುವ ಸವಾಲು, ಅನುಭವಿಸಿರುವ ಸಂಕಷ್ಟಗಳ ಬಗೆಗೆ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ವ್ಯಕ್ತಿಯ ಸಂದರ್ಭದಲ್ಲಿ ಆತ್ಮಾವಲೋಕನ ಹೇಗೆ ವ್ಯಕ್ತಿತ್ವದ ಬೆಳವಣಿಗೆಗೆ ಪ್ರೇರಕವೋ ಹಾಗೆಯೇ ನಾಡಿನ ಸಂದರ್ಭದಲ್ಲಿಯೂ ಆತ್ಮಾವಲೋಕನವೆಂಬುದು ಹಿಂದಣ ಹೆಜ್ಜೆಯನರಿತು ಮುಂದಣ ಹೆಜ್ಜೆಯನಿಡುವ ವಿವೇಕದ ಕ್ರಮ.

ಕನ್ನಡಿಗರೇ ಏಳಿ! ಎದ್ದೇಳಿ! ಬೌದ್ಧಿಕರೆಂದು ಕರೆದುಕೊಳ್ಳುವ ಜನರೂ, ರಾಜಕಾರಣಿಗಳೂ ವಿಶ್ವಭ್ರಾತೃತ್ವ, ಭಾರತದ ಅಖಂಡತೆ, ಭಾಷಾಂಧತೆ ಇತ್ಯಾದಿ ಮಾತು ಗಳಿಂದ ನಮ್ಮನ್ನು ವಂಚಿಸಲು ಯತ್ನಿಸುತ್ತಿ ರುವವರ ಬಗ್ಗೆ ಜಾಗೃತರಾಗೋಣ. ಕನ್ನಡಿಗರು ಎಂದೂ ಭಾಷಾಂಧರಲ್ಲ, ದೇಶದ್ರೋಹಿಗಳಲ್ಲ, ನಮ್ಮ ಪರಂಪರೆಯ ಬಗ್ಗೆ ಹೆಮ್ಮೆಪಡೋಣ. ತನ್ನತನವನ್ನು ಉಳಿಸಿಕೊಳ್ಳದ ಪ್ರಾಂತ್ಯಕ್ಕೆ ಉಳಿಗಾಲವಿಲ್ಲ.

ಅನ್ಯಭಾಷೀಯ ಸೋದರರನ್ನು ಗೌರವಿ ಸೋಣ, ಆದರೆ ಅನ್ಯಭಾಷೀಯ ಸೋದ ರರು ಕರ್ನಾಟಕಕ್ಕೆ ಬಂದು ಕರ್ನಾಟಕವನ್ನು ತಮ್ಮ ವಸಾಹತುಗಳಾಗುವಂತೆ ಮಾಡುತ್ತಿದ್ದಾರೆ. ಇದನ್ನು ತಡೆಯದಿದ್ದರೆ ನಮಗೆ ಉಳಿಗಾಲ ವಿಲ್ಲ. ಧೀರರಾದ ಅಸ್ಸಾಂ ಯುವಕರು ಹೋರಾಡಿ ತಮ್ಮ ಪ್ರಾಂತ್ಯವನ್ನು ವಿನಾಶದಿಂದ ತಪ್ಪಿಸಿದರು. ಅಂತಹ ಹೋರಾಟಕ್ಕೆ ಕನ್ನಡಿಗರಾದ ನಾವು ಸಿದ್ಧರಾಗಬೇಕಿದೆ.

ಗಡಿಯಲ್ಲಿ ಮರಾಠಿಗರು, ತಮಿಳರು, ಮಲಯಾಳಿಗಳು ಕನ್ನಡವನ್ನು ಲೆಕ್ಕಿಸುತ್ತಿಲ್ಲ. ಭವಿಷ್ಯದ ಬೆಂಗಳೂರು ಗಾಬರಿಯನ್ನು ಹುಟ್ಟಿಸುತ್ತದೆ. ಕರ್ನಾಟಕದಲ್ಲಿ ಕನ್ನಡ ಮಕ್ಕಳು ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ. ಕೇಂದ್ರದಲ್ಲಿ ಕನ್ನಡಿಗರ ಧ್ವನಿ ದುರ್ಬಲದ ಮಾತಿರಲಿ ಅದು ಇಲ್ಲವೇ ಇಲ್ಲ. ಇಂತಹ ಸಂದರ್ಭದಲ್ಲಿ ಕನ್ನಡ ಜನ ಒಗ್ಗಟ್ಟಿನಿಂದ ನಿಂತು ತಮ್ಮೆಲ್ಲ ಶಕ್ತಿಯನ್ನು ಬಳಸಿ ತಮ್ಮ ಆತ್ಮರಕ್ಷಣೆ ಮಾಡಿಕೊಳ್ಳಬೇಕಾಗಿದೆ.

1956 ರಲ್ಲಿ ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯಾಗಿ 19 ಜಿಲ್ಲೆಗಳ ಮೈಸೂರು ರಾಜ್ಯ ಉದಯವಾಯಿತು. ಅದು ಮುಂದೆ ಕನ್ನಡಿಗರ ಹೋರಾಟದಿಂದ 1973 ರಲ್ಲಿ ಕರ್ನಾಟಕವಾಯಿತು. ಆ ಹೋರಾಟ ಇನ್ನೂ ಕುಗ್ಗದಂತೆ ಮಾಡೋಣ. ಕರ್ನಾಟಕದಲ್ಲಿ ಕರ್ನಾಟಕವು ರಾಜರಾಜೇಶ್ವರಿಯಾಗಿ ಮೆರೆದು, ಭಾರತೀಯ ಸಂಸ್ಕೃತಿಯ ವಜ್ರಮುಕುಟದಂತೆ ಬೆಳಗಲಿ. ಅದಕ್ಕಾಗಿ ಶ್ರಮಿಸೋಣ, ಭವಿಷ್ಯದತ್ತ ಕಣ್ಣು ನೆಟ್ಟು ನಮ್ಮ ಹಿಂದಿನ ಸಂಸ್ಕೃತಿಯಿಂದ ಸ್ಫೂರ್ತಿಯನ್ನು ಪಡೆದು ಮುನ್ನಡೆಯೋಣ.



**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ.

### ಕನ್ನಡಮ್ಮನ ಪೂಜೆ

ಕನ್ನಡಮ್ಮನ ಪೂಜೆಯ ಮಾಡುವ
ಬನ್ನಿರಿ ಎಲ್ಲರು ಪ್ರೀತಿಯಲಿ
ಕನ್ನಡ ಪ್ರೇಮದ ಆರತಿ ಹಚ್ಚಿ
ಚೆನ್ನಾಗಿ ಬೆಳಗುವ ಭಕ್ತಿಯಲಿ

ಅನ್ನವ ನೀಡಿ ಸ್ಥಳವನು ನೀಡಿ
ಅನುದಿನ ನಮ್ಮನು ಸಲಹುವಳು
ಏನನು ಬಯಸದೆ ನೀಡುವಳು
ಅನನ್ಯ ತಾಯಿ ಇವಳಾಗಿಹಳು

ತನ್ನ ಮಡಿಲಿಗೆ ಬಂದ ಅನ್ಯರನೂ
ತನ್ನ ಮಕ್ಕಳಂತೆ ಕಾಣುವಳು
ತನ್ನನು ಬಿಟ್ಟಿಹ ಮಕ್ಕಳ ಕಂಡು
ಮನದಿ ನೊಂದು ತಾಯಿ ಸೊರಗಿಹಳು

ನಮ್ಮಲಿ ಇರದುದು ಇಲ್ಲ ಲೋಕದಲಿ
ನಮ್ಮಮ್ಮನ ನಾವ್ ತೆಗಳುವುದೇ?
ಅಮ್ಮಗೆ ಗೌರವ ಕೊಡದಿಹ ಮಗುವಿಗೆ
ನೆಮ್ಮದಿ ಸುಖವು ಸಿಕ್ಕುವುದೇ?

ಇಂದು ಸಂಕಲ್ಪವ ಮಾಡುವ ಎಲ್ಲರು
ಎಂದೆಂದು ತಾಯಿಯ ನಲಿಸೋಣ
ಚೆಂದದ ಕನ್ನಡ ನಾಡು ನುಡಿಯನು
ಅಂಬರದೆತ್ತರ ಬೆಳೆಸೋಣ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

### ಹಿಂದುತ್ವ ಗೆದ್ದರೆ ಭಾರತದ ವಿಚಾರಧಾರೆಗೆ ಸೋಲು

**(1ನೇ ಪುಟದಿಂದ)** ಅದೊಂದು ಸಂಘಿ ಹಿಂದುತ್ವ. ಇವೆರಡರ ನಡುವೆ ವ್ಯತ್ಯಾಸ ಇದೆ ಎಂದು ಥರೂರ್ ಬರೆದಿರುವ 'ಬ್ಯಾಟಲ್ ಆಫ್ ಬಿಲಾಂಗಿಂಗ್' ಪುಸ್ತಕದಲ್ಲಿ ಹೇಳಲಾಗಿದೆ. ಪುಸ್ತಕ ಶನಿವಾರ ಬಿಡುಗಡೆಯಾಗಿದೆ.

ಆಡಳಿತಾರೂಢ ಪಕ್ಷವು ಪಾಕಿಸ್ತಾನದ ಹಿಂದೂ ಸ್ವರೂಪವನ್ನು ಸೃಷ್ಟಿಸಲು ಬಯಸಿದೆ. ನಾವು ಇಂತಹ ದೇಶಕ್ಕಾಗಿ ಸ್ವಾತಂತ್ರ್ಯ ಹೋರಾಟ ನಡೆಸಿರಲಿಲ್ಲ, ಇದು ಸಂವಿಧಾನದಲ್ಲಿರುವ ವಿಚಾರಧಾರೆಯೂ ಅಲ್ಲ ಎಂದು ಥರೂರ್ ಹೇಳಿದ್ದಾರೆ.

ಹಿಂದುತ್ವ ಎಂಬುದು ರಾಜಕೀಯ ಸಿದ್ಧಾಂತವೇ ಹೊರತು ಅದು ಧಾರ್ಮಿಕವಲ್ಲ ಎಂದೂ ಅವರು ಪ್ರತಿಪಾದಿಸಿದ್ದಾರೆ.

## ಕೂಡ್ಲಿಗಿಯಲ್ಲಿ ಶ್ರೀ ವಾಲ್ಮೀಕಿ ಮಹರ್ಷಿ ಜಯಂತಿ, ರಾಷ್ಟ್ರೀಯ ಏಕತಾ ದಿನಾಚರಣೆ



ಕೂಡ್ಲಿಗಿ, ಅ.31 - ಕೂಡ್ಲಿಗಿ ಡಿವೈಎಸ್ಪಿ ಕಚೇರಿಯಲ್ಲಿ ಶ್ರೀ ವಾಲ್ಮೀಕಿ ಮಹರ್ಷಿ ಜಯಂತಿ ಹಾಗೂ ರಾಷ್ಟ್ರೀಯ ಏಕತಾ ದಿನಾಚರಣೆ ಆಚರಿಸಲಾಯಿತು. ಡಿವೈಎಸ್ಪಿ ಹರೀಶ್ ರೆಡ್ಡಿ ಅವರು ಸಿಬ್ಬಂದಿಯೊಂದಿಗೆ, ಶ್ರೀ ವಾಲ್ಮೀಕಿ ಮಹರ್ಷಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ನಂತರ ಸರ್ದಾರ್ ವಲ್ಲಭ ಬಾಯ್ ಪಟೇಲರು ಜಾರಿಗೆ ತಂದಿರುವ ರಾಷ್ಟ್ರೀಯ ಏಕತಾ ದಿನಾಚರಣೆ ಪ್ರಯಕ್ತ ಅವರು ಸಿಬ್ಬಂದಿಗೆ ಐಕ್ಯತೆ ಪಾಲನೆ ಕುರಿತು ಪ್ರಮಾಣ ವಚನ ಬೋಧಿಸಿದರು. ಅವರು ಸಿಬ್ಬಂದಿಯೊಂದಿಗೆ ತಮ್ಮ ಕರ್ತವ್ಯದಲ್ಲಿ ಪ್ರಾಮಾಣಿಕತೆ ಹಾಗೂ ರಾಷ್ಟ್ರೀಯತೆಯೊಂದಿಗೆ ಐಕ್ಯತೆಯನ್ನು ಪ್ರತಿಪಾದಿಸುವುದು ಮತ್ತು ಪಾಲಿಸುವ ಕುರಿತು ಸಂಕಲ್ಪ ತೋರುವುದಾಗಿ ಪ್ರಮಾಣ ವಚನಗೈದರು. ಪೊಲೀಸ್ ಸಿಬ್ಬಂದಿಯವರಾದ ಅಜ್ಜಪ್ಪ ಗೌಡ, ರಾಮಾಂಜನೇಯ, ಇರ್ಷಾದ್ ಅಹಮ್ಮದ್, ಚನ್ನಬಸವನಗೌಡ, ರೇವಣ್ಣ, ನಾಗಭೂಷಣ ಹಾಜರಿದ್ದರು.

## ಸಮುದ್ರ ವಿಮಾನ ಉದ್ಘಾಟನೆ

**(1ನೇ ಪುಟದಿಂದ)** ಏಕತಾ ದಿನ ಎಂದು ಆಚರಿಸಲಾಗುತ್ತಿದೆ.

ಸುಮಾರು 40 ನಿಮಿಷಗಳ ಹಾರಾಟದಲ್ಲಿ 200 ಕಿ.ಮೀ. ಸಂಚರಿಸಿದ ನಂತರ ಮೋದಿ ಅವರಿದ್ದ ವಿಮಾನ ಸಾಬರಮತಿ ನದಿ ದಡಕ್ಕೆ ತಲುಪಿದೆ.

## ಬಿ.ಎಲ್. ವೇಣು, ಸಿರಿಗೆರೆ ತಿಪ್ಪೇಶ್ ಸೇರಿ ಐವರಿಗೆ ವಾಲ್ಮೀಕಿ ಪ್ರಶಸ್ತಿ

**(1ನೇ ಪುಟದಿಂದ)** ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಅವರು ರಾಜನಹಳ್ಳಿ ಶ್ರೀಗಳ ಸಮ್ಮುಖದಲ್ಲಿ ಪ್ರಕಟಿಸಿದರು.

**ಸಿಎಂಗೆ ಮನವಿ :** ಶಾಸಕರ ಭವನದ ಮುಂಭಾಗದಲ್ಲಿರುವ ವಾಲ್ಮೀಕಿ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಎಸ್ಟಿ ಮೀಸಲಾತಿ ಹೆಚ್ಚಳ ಮಾಡುವ ಬಗ್ಗೆ ಮತ್ತೊಮ್ಮೆ ಮನವಿ ಪತ್ರ ನೀಡಿದರು.

ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಮತ್ತಿತರರು ಈ ವೇಳೆ ಹಾಜರಿದ್ದರು.

### ಮನದ ಮಂಥನ...

ಪ್ರಪಂಚದಲ್ಲೆಲ್ಲಾ ಕೊರೊನಾದ ಹರುಡುವಿಕೆ
ತಂದಿದೆ ಒಂದಲ್ಲಾ ಒಂದು ರೀತಿಯ ತಡೆಯುವಿಕೆ

ಪ್ರಕೃತಿಯ ಸವಿಯಲು ಪಯಣಿಸಿದ್ದೆವು ವಿಶ್ವದ ಉದ್ದಗಲ
ಆನಂದಿಸಲು ಆರಾಮಿಸಲು ಸಾಗಿದ್ದೆವು ದಾಟಿ ಸಾಗರಗಳ

ನೋಡಿದಷ್ಟು ಅನುಭವಿಸಿದಷ್ಟು
ಆಸೆಪಟ್ಟೆವು ಲೆಕ್ಕವಿಲ್ಲದಷ್ಟು
ದಣಿದ ಭೂದೇವಿ ಮೌನದಿ ನುಂಗಿದಳು ಸಹಿಸುವಷ್ಟು

ತನ್ನ ಇಂಗಿತವನು ತಿಳಿಸಿದಳು ಬಾರಿ ಬಾರಿ
ಭೂಕಂಪ ಪ್ರವಾಹ ಚಂಡಮಾರುತ ನಾನಾವರಿ

ಆಗುಹೋಗುಗಳಿಗೆ ಮನುಜ ಮಣಿಯಲಿಲ್ಲ ಕಿಂಚಿತ್ತು
ಸಮತೋಲನ ತರಲು ನಡೆಸಿರುವಳು ಕಸರತ್ತು

ತತ್ತರಿಸಿದೆ ಭೂತಾಯಿಯ ಒಡಲು
ನಮ್ಮ ಈ ಅತಿರೇಕಕೆ
ತಿದ್ದಿಕೊಳ್ಳದೆ ಹೋದರೆ ಜನಜೀವನ ತಳ್ಳುವುದು ನಶ್ವರಕೆ

**- ಗಾಯತ್ರಿ ಮೂಗನಗೌಡ,** ದಾವಣಗೆರೆ.

## ಕೆಳಗಿಳಿಸಲು ಸಾಧ್ಯವಿಲ್ಲ

**(1ನೇ ಪುಟದಿಂದ)** ಸತತವಾಗಿ ನೆರೆ ಉಂಟಾಗಿದೆ. ನೆರೆ ಸಂತ್ರಸ್ತರಿಗೆ ತಕ್ಷಣ ಪರಿಹಾರ ಕಲ್ಪಿಸುವುದರಲ್ಲಿ ಬಿಜೆಪಿ ಸರ್ಕಾರ ಪ್ರಮುಖ ಪಾತ್ರ ವಹಿಸಿದೆ. ಕೊರೊನಾ ಸಂಕಷ್ಟದಲ್ಲೂ ಅಭಿವೃದ್ಧಿ ಕಾರ್ಯಗಳನ್ನು ನಮ್ಮ ಸರ್ಕಾರ ಕೈಗೊಂಡಿದೆ. ಚುನಾವಣೆಗಾಗಿ ಪ್ರತಿಪಕ್ಷದ ನಾಯಕರುಗಳು ಅಪಪ್ರಚಾರ ಮಾಡುತ್ತಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವ ಎರಡು ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಧೂಳಿಪಟವಾಗಲಿವೆ ಎಂದು ಭವಿಷ್ಯ ನುಡಿದರು.

## ಪಡಿತರ ಮೂಲಕ ಈರುಳ್ಳಿ

**(1ನೇ ಪುಟದಿಂದ)** ಪಡಿತರ ಇಲಾಖೆಯ ನಿರ್ದೇಶಕ ಸಿದ್ಧಿವಿನಾಯಕ ನಾಯಕ್ ತಿಳಿಸಿದ್ದಾರೆ.

ರಾಜ್ಯದ 3.5 ಲಕ್ಷ ಪಡಿತರದಾರರಿಗೆ ತಲಾ 3 ಕೆಜಿ ಈರುಳ್ಳಿಯನ್ನು 32 ರೂ. ದರದಲ್ಲಿ ನೀಡಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ.

ಈರುಳ್ಳಿ ದಾಸ್ತಾನು ಬಂದ ನಂತರ ಪಡಿತರದಾರರಿಗೆ ಆ ಬಗ್ಗೆ ಜಾಹೀರಾತು, ಎಸ್.ಎಂ.ಎಸ್. ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ತಿಳಿಸಲಾಗುವುದು. ನಂತರ ಅವರು ಪಡಿತರ ಅಂಗಡಿಗಳ ಮೂಲಕ ಖರೀದಿ ಮಾಡಬಹುದು ಎಂದು ನಾಯಕ್ ಹೇಳಿದ್ದಾರೆ.

**ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:

**ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್**
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399

**ಸುಭದ್ರ ಆರ್ಥಿಕ ಭವಿಷ್ಯತ್ತಿಗಾಗಿ**

ಆತ್ಮೀಯರೇ, ಸಾಲದ EMI ನಿಂದ ಮುಕ್ತರಾಗಿ ಉಳಿತಾಯದ ಹೆಜ್ಜೆಗೆ ಸಾಗಲು ಸುಭದ್ರ ಹೂಡಿಕೆಯ ಮುಖಾಂತರ ಮಕ್ಕಳ ವಿದ್ಯಾಭ್ಯಾಸ, ಮದುವೆ ಹಾಗೂ ನಿವೃತ್ತಿ ಜೀವನದ ನೆಮ್ಮದಿಯ ಆರ್ಥಿಕ ಜೀವನಕ್ಕಾಗಿ ದುಡ್ಡನ್ನೇ ದುಡಿಸುವ ಮುಖಾಂತರ ಆರ್ಥಿಕವಾಗಿ ಮತ್ತು ಆರೋಗ್ಯಯುತವಾಗಿ ಸದೃಢರಾಗಲು ಒಮ್ಮೆ ಸಂಪರ್ಕಿಸಿ

**ANVITH ENTERPRISES-MPK- Financial Advisor**
**P.J. Extenstion, Davanagere-577002**
**(M) - 99809 16126**

**ಹುಟ್ಟುಹಬ್ಬದ ಹೃದಯಸ್ಪರ್ಶಿ ಶುಭಾಶಯಗಳು**

ನಮ್ಮ ಆತ್ಮೀಯ ನಾಯಕರು, ಮಾಜಿ ಸಚಿವರು, ವಿಧಾನಸಭೆಯ ಮಾಜಿ ಅಧ್ಯಕ್ಷರು ಆದ

**ಸನ್ಮಾನ್ಯ ಶ್ರೀ ಕೆ.ಬಿ.ಕೋಳಿವಾಡ**

ಅವರಿಗೆ ಹೃದಯಸ್ಪರ್ಶಿ ಶುಭಾಶಯಗಳು.

ಶುಭ ಕೋರುತ್ತಿರುವವರು :

**ಮಾಂಡ್ರೆ ಸ್ವೀಟ್ ಮಾರ್ಟ್**
ಎಂ.ಜಿ. ರಸ್ತೆ, ರಾಣೇಬೆನ್ನೂರು.




ರವಿ ರಾಮಣ್ಣ ಮಾಂಡ್ರೆ
ಮಾಜಿ ಸದಸ್ಯರು ನಗರಸಭೆ, ರಾಣೇಬೆನ್ನೂರು.


ಕಿರಣ ರಾಮಣ್ಣ ಮಾಂಡ್ರೆ
ರಾಣೇಬೆನ್ನೂರು.


ರಾಹುಲ ಬಸವರಾಜ ಮಾಂಡ್ರೆ
ರಾಣೇಬೆನ್ನೂರು.


ರಾಮಕುಮಾರ ಬಸವರಾಜ ಮಾಂಡ್ರೆ, ರಾಣೇಬೆನ್ನೂರು.

# ಕಾಂಗ್ರೆಸ್ ನಿಂದ ಕಿಸಾನ್ ಅಧಿಕಾರ ದಿವಸ್: ಬಿಜೆಪಿ ವಿರುದ್ಧ ಪ್ರತಿಭಟನೆ



ದಾವಣಗೆರೆ, ಅ.31- ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಸರ್ದಾರ್ ವಲ್ಲಭಬಾಯಿ ಪಟೇಲ್ ಜನ್ಮ ದಿನಾಚರಣೆ ಅಂಗವಾಗಿ ನಗರದ ಜಯದೇವ ವೃತ್ತದಲ್ಲಿಂದು ಕಿಸಾನ್ ಅಧಿಕಾರ ದಿವಸ್ ಆಚರಿಸಲಾಯಿತು. ಅಲ್ಲದೇ ಬಿಜೆಪಿಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ಕಾನೂನುಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪ ಮಾತನಾಡಿ, ಉದ್ಯೋಗ ಸೃಷ್ಟಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಶ್ರೀಮಂತರು, ಉದ್ಯಮಿಗಳ ಪರವಾಗಿ ಬಿಜೆಪಿ ಸರ್ಕಾರ ನಿಂತಿದೆ. ಖಾಸಗೀಕರಣ, ಆಧುನೀಕರಣ ಹೆಸರಲ್ಲಿ ದೇಶವನ್ನೇ ಮಾರಾಟಕ್ಕೆ ಯತ್ನಿಸಲಾಗುತ್ತಿದೆ. ಕೋವಿಡ್ ಹೆಸರಲ್ಲಿ ದೊಡ್ಡ ಭ್ರಷ್ಟಾಚಾರ ನಡೆಯುತ್ತಿದೆ. ಪಾರದರ್ಶಕ ಆಡಳಿತವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭೂ ಸುಧಾರಣೆ, ವಿದ್ಯುತ್ ಬಿಲ್, ಎಪಿಎಂಸಿ ಕಾಯ್ದೆ ತಿದ್ದುಪಡಿ ಮಾಡಿ ಜಾರಿಗೆ ತರುವ ಮೂಲಕ ರೈತರ ಮರಣ ಶಾಸನ ಬರೆದಿದ್ದಾರೆ. ರೈತರ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ಸಿಗುತ್ತಿಲ್ಲ. ರೈತರ ಜಮೀನನ್ನು ಖಾಸಗಿಯವರಿಗೆ ನೀಡಿ ಕೃಷಿಯನ್ನೇ ನಿರ್ಮೂಲನಕ್ಕೆ ಮುಂದಾಗಿದೆ ಎಂದು ದೂರಿದರು.

ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಗುವಂತೆ ಮಾಡುವ ಕಾಯ್ದೆ ತರಬೇಕು. ಈ ಕೂಡಲೇ ಕಾಯ್ದೆಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು ವಿ. ಶಿವಗಂಗಾ ಮಾತನಾಡಿ, ದೇಶದಲ್ಲೇ ಜನ ವಿರೋಧಿ ಹಾಗೂ ರೈತ ವಿರೋಧಿ ಆಡಳಿತ ಮಾಡಲಾಗುತ್ತಿದೆ. ಭಾರತ ದೇಶದ ರಾಜಕೀಯ ಇತಿಹಾಸದಲ್ಲೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಬಿಜೆಪಿ ಸರ್ಕಾರ ದುರಾಡಳಿತ ಮಾಡುತ್ತಿದೆ ಎಂದು ಆಪಾದಿಸಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್, ನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಸದಸ್ಯರಾದ ದೇವರಮನಿ ಶಿವಕುಮಾರ್, ಜಿ.ಎಸ್. ಮಂಜುನಾಥ್ ಗಡಿಗುಡಾಳ್, ಪಾಮೇನಹಳ್ಳಿ ನಾಗರಾಜ್, ಆಶಾ ಉಮೇಶ್, ಸುಧಾ ಇಟ್ಟಿಗುಡಿ, ಸವಿತಾ ಗಣೇಶ್ ಹುಲ್ಮನಿ, ಶ್ವೇತಾ ಶ್ರೀನಿವಾಸ್, ಮಹಿಳಾ ಘಟಕದ ಅಧ್ಯಕ್ಷೆ ಅನಿತಾಬಾಯಿ ಮಾಲತೇಶ್, ಕೆಪಿಸಿಸಿ ಸದಸ್ಯ ಅಣಜಿ ಅಂಜಿನಪ್ಪ, ಸಾಮಾಜಿಕ ಜಾಲತಾಣದ ಗೋವಿಂದ್ ಹಾಲೇಕಲ್ಲು, ಮಹಿಳಾ ಕಾಂಗ್ರೆಸ್‌ನ ಶುಭಮಂಗಳ, ರಾಜೇಶ್ವರಿ, ಉಮಾಕುಮಾರ್, ಕವಿತಾ, ಆವರಗೆರೆಯ ಲಕ್ಷ್ಮೀಬಾಯಿ ಅಣ್ಣಪ್ಪ, ಸರ್ವಮಂಗಳಮ್ಮ, ರಾಧಾಬಾಯಿ, ಗೀತಾ ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

# ವಿದ್ಯಾವಂತರು ಹೆಚ್ಚಾದಂತೆ ಸಂಸ್ಕಾರ ನಾಶ

## ತರಳಬಾಳು ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ವೈ.ವೃಷಭೇಂದ್ರಪ್ಪ ಕಳವಳ



ದಾವಣಗೆರೆ, ಅ. 31- ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರು ಹೆಚ್ಚಾದಂತೆ ಸಂಸ್ಕೃತಿ, ಸಂಸ್ಕಾರವೂ ನಶಿಸುತ್ತಿದೆ ಎಂದು ಬಾಪೂಜಿ ವಿದ್ಯಾಸಂಸ್ಥೆಯ ನಿರ್ದೇಶಕ ವೈ. ವೃಷಭೇಂದ್ರಪ್ಪ ಕಳವಳ ವ್ಯಕ್ತಪಡಿಸಿದರು.

ನಗರದ ತರಳಬಾಳು ಕ್ಷೇಮಾಭಿವೃದ್ಧಿ ಬಳಗದ ವತಿಯಿಂದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ತರಳಬಾಳು ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಹಿಂದಿನ ದಿನಗಳಲ್ಲಿ ಅವಿದ್ಯಾವಂತರು ಹೆಚ್ಚಾಗಿದ್ದರೂ ಸಂಸ್ಕೃತಿ, ಸಂಸ್ಕಾರಕ್ಕೆ ಬರವಿರುತ್ತಿರಲಿಲ್ಲ. ಊರಿಗೆ ಯಾರೇ ಹೊಸಬರು ಬಂದರೂ ಉತ್ತಮ ಆತಿಥ್ಯ ದೊರೆಯುತ್ತಿತ್ತು. ಇಂದು ಶೇ.75ರಷ್ಟು ವಿದ್ಯಾವಂತರಿದ್ದರೂ ಸಂಸ್ಕಾರ ಮರೆಯಾಗಿದೆ ಎಂದರು.

ತರಳಬಾಳು ಬೃಹನ್ಮಠದ ಲಿಂ.ಜಗದ್ಗುರು ಶಿವಕುಮಾರ ಸ್ವಾಮೀಜಿಯವರು ಕೊಡುವ ಪ್ರವೃತ್ತಿಯನ್ನು ಸಮಾಜಕ್ಕೆ ಕಲಿಸಿಕೊಟ್ಟರು. ತರಳಬಾಳುನಿಧಿಸಂಗ್ರಹಿಸುವಾಗಮಹಿಳೆಯರೇ ಹೆಚ್ಚು ಹಣ ನೀಡುತ್ತಿದ್ದರು ಎಂದು ವೃಷಭೇಂದ್ರಪ್ಪ ನೆನಪಿಸಿಕೊಂಡರು.

ಮಹಿಳೆಯರು, ಬಡವರ ಹಿತ ದೃಷ್ಟಿಯಿಂದ ಶ್ರೀಗಳು ಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ ಪರಿಣಾಮ ಇಂದು ಅನೇಕ ಮಹಿಳೆಯರು ವೈದ್ಯರು, ಇಂಜಿನಿಯರ್‌ಗಳಾಗಿದ್ದಾರೆ. ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿಯಲ್ಲಿ ಅಧಿಕಾರ ಹಿಡಿದಿದ್ದಾರೆ ಎಂದರು.

### ಶಾಲಾ ವಾತಾವರಣದಲ್ಲಿನ ಕಲಿಕೆಗೆ ಸಮನಾದದ್ದು ಯಾವುದೂ ಇಲ್ಲ

ಶಿಕ್ಷಕ-ವಿದ್ಯಾರ್ಥಿ ಕಲಿಕೆ ಮಹತ್ವದ್ದು. ಶಾಲಾ ವಾತಾವರಣದಲ್ಲಿನ ಕಲಿಕೆಗೆ ಸಮಾನಾದದ್ದು ಯಾವುದೂ ಇಲ್ಲ ಎಂದು ವೈ.ವೃಷಭೇಂದ್ರಪ್ಪ ಹೇಳಿದರು.

ಇತ್ತೀಚೆಗೆ ಶಾಲಾ ಆರಂಭದ ಬಗ್ಗೆ ಪರ-ವಿರೋಧ ಚರ್ಚೆಗಳು ನಡೆಯುತ್ತಿವೆ. ಪ್ರಸ್ತುತ ದಿನಗಳಲ್ಲಿ ಒಂದು ಅಥವಾ ಎರಡು ಮಕ್ಕಳನ್ನು ಹೊಂದುವ ಪೋಷಕರು, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವ ಜೊತೆಗೆ ಆರೋಗ್ಯದ ಬಗ್ಗೆ ಚಿಂತೆಯನ್ನೂ ಮಾಡುತ್ತಾರೆ.

ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಬದುಕು ರೂಪಿಸಿಕೊಳ್ಳಬೇಕಿದೆ. ಶಾಲೆಗಳು ಆರಂಭವಾದರೆ ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಬೇಕು. ಅನಗತ್ಯವಾಗಿ ಸ್ನೇಹಿತರೊಡನೆ ಬೆರೆಯುವುದನ್ನು ಇನ್ನೂ ಕೆಲ ದಿನಗಳ ಮಟ್ಟಿಗೆ ಮುಂದೂಡಬೇಕು ಎಂದು ಸಲಹೆ ನೀಡಿದರು.

ಕೋವಿಡ್-19 ವೈರಸ್ ನಿಂದ ನಗರದಲ್ಲೂ ಅನೇಕ ಸಾವುಗಳು ಸಂಭವಿಸಿದವು. ಸೋಂಕು ಶ್ವಾಸಕೋಶಕ್ಕೆ ಹಾನಿ ಮಾಡುತ್ತದೆ. ನಾವು ಅದನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಳ್ಳಬೇಕಾದರೆ ಶುದ್ಧ ಗಾಳಿ ಸೇವಿಸಬೇಕು. ಪ್ರತಿ ದಿನ ವಾಯುವಿಹಾರ ಮುಂತಾದ ದೈಹಿಕ ಚಟುವಟಿಕೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಶಿವ ರೈಸ್ ಮಿಲ್ ಮಾಲೀಕ ದಾಗಿನಕಟ್ಟೆ ನಾಗರಾಜಪ್ಪ ಮಾತನಾಡುತ್ತಾ, ವಿದ್ಯಾರ್ಥಿಗಳು ಯಾವ ವಿಷಯ ಆಯ್ದುಕೊಂಡರೂ, ಆಳವಾದ ಅಧ್ಯಯನ ಮಾಡಿದಾಗ ಯಶಸ್ಸು ಪಡೆಯಲು ಸಾಧ್ಯ ಎಂದರು.


ಸಹಕಾರ ಸಂಘಗಳ ಅಪರ ನಿಬಂಧಕರೂ, ಸಹಕಾರ ಚುನವಣಾ ಆಯೋಗದ ಕಾರ್ಯದರ್ಶಿಗಳೂ ಆದ ಬಿ.ಹೆಚ್. ಮಂಜಪ್ಪ ಬಿದರಗಡ್ಡೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ನಿವೃತ್ತ ಡಿವೈಎಸ್ಪಿ ಹೆಚ್.ಕೆ. ರೇವಣ್ಣ, ನಿವೃತ್ತ ಸಹ ಪ್ರಾಧ್ಯಾಪಕ ಡಾ.ಶಿವಾನಂದ, ತರಳಬಾಳು ಕ್ಷೇಮಾಭಿವೃದ್ಧಿ ಬಳಗದ ಕಾರ್ಯದರ್ಶಿ ಡಿ.ಎಂ. ಶಿವಕುಮಾರ್ ಉಪಸ್ಥಿತರಿದ್ದರು. ಬಳಗದ ಅಧ್ಯಕ್ಷ ಆರ್.ಶಿವಕುಮಾರಸ್ವಾಮಿ ಕುರ್ಕಿ ಅತಿಥಿಗಳನ್ನು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

ಸ್ವರ್ಣಗೌರಿ ಕುರ್ಕಿ ಪ್ರಾರ್ಥಿಸಿದರು. ರಂಗೇಶಿ ಓಬಳಾಪುರ ವಂದಿಸಿದರು.

# ವಾಲ್ಮೀಕಿ ಸಮುದಾಯಕ್ಕೆ ಶೇ.7.5 ರಷ್ಟು ಮೀಸಲಾತಿ ನೀಡಲು ಆಗ್ರಹ

## ಕೊಗ್ಗನೂರು ಗ್ರಾಮದ ವಾಲ್ಮೀಕಿ ಜಯಂತಿ ಆಚರಣೆಯಲ್ಲಿ ಜಿ.ಪಂ.ಸದಸ್ಯ ಕೆ.ಎಸ್. ಬಸವಂತಪ್ಪ



ದಾವಣಗೆರೆ, ಅ.31- ಆನಗೋಡು ಹೋಬಳಿ ಕೊಗ್ಗನೂರು ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿಯವರ ಜಯಂತಿ ಕಾರ್ಯಕ್ರಮವನ್ನು ಶ್ರದ್ಧಾ-ಭಕ್ತಿಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಜಿ.ಪಂ. ಸದಸ್ಯ ಕೆ.ಎಸ್. ಬಸವಂತಪ್ಪ ಮಾತನಾಡಿ, ವಾಲ್ಮೀಕಿ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯಲ್ಲಿ ಶೇ. 7.5 ರಷ್ಟು ಹೆಚ್ಚಿಸಿ, ಸಮುದಾಯವು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಉನ್ನತ ಸ್ಥಾನಕ್ಕೆ ಬರಲು ಸರ್ಕಾರ ನೆರವಾಗಿ ನುಡಿದಂತೆ ನಡೆದುಕೊಳ್ಳಬೇಕೆಂದು ಆಗ್ರಹಿಸಿದರು.

ವಾಲ್ಮೀಕಿ ಗುರುಪೀಠದಿಂದ ಬೆಂಗಳೂರಿನ ವರೆಗೆ ವಾಲ್ಮೀಕಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡಲು ಪರಮ ಪೂಜ್ಯ ಶ್ರೀಗಳ ನೇತೃತ್ವದಲ್ಲಿ ಪಾದಯಾತ್ರೆ ಮಾಡಿ, ಸರ್ಕಾರವನ್ನು ಎಚ್ಚರಿಸಿದ್ದರೂ ಸಹ ಸರ್ಕಾರ ಜಾಣ ಕಿವುಡು ನೀತಿ ಅನುಸರಿಸುತ್ತಿರುವುದು ಸರಿಯಲ್ಲ ಎಂದರು.

ಹಿಂದಿನ ಸಿದ್ಧರಾಮಯ್ಯ ಸರ್ಕಾರ ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಅನುದಾನವನ್ನು ಜನಸಂಖ್ಯೆಗೆ ಅನುಗುಣವಾಗಿ ಕಾಯ್ದೆಯನ್ನು ರೂಪಿಸಿ, ಅನುದಾನವನ್ನು ಮೀಸಲಿಟ್ಟು ಪ್ರತಿ ವರ್ಷ ಸುಮಾರು 30 ಸಾವಿರ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ, ಪ.ಜಾ. ಮತ್ತು ಪ.ಪಂ. ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ್ದರು. ಆದರೆ, ಈಗಿನ ಸರ್ಕಾರ ಈ ಸಮುದಾಯಗಳನ್ನು ಕಡೆಗಣಿಸಿ, ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಟೀಕಿಸಿದರು.

ಮಹರ್ಷಿ ವಾಲ್ಮೀಕಿಯವರು ರಾಮಾಯಣವನ್ನು ರಚಿಸಿ, ಶ್ರೀರಾಮನ ಆದರ್ಶಗಳನ್ನು ಸಮುದಾಯದ ಎಲ್ಲಾ ವರ್ಗಗಳಿಗೂ ಮಾರ್ಗದರ್ಶನ ನೀಡಿದ್ದರು. ಶ್ರೀರಾಮ ಮಂದಿರ ನಿರ್ಮಾಣದ ಸ್ಥಳದಲ್ಲಿಯೇ ಮಹರ್ಷಿ ವಾಲ್ಮೀಕಿಯವರ ಮಂದಿರವನ್ನು ನಿರ್ಮಿಸಿ, ಅವರ ಆದರ್ಶಗಳನ್ನು ಜನತೆಗೆ ತಿಳಿಸಲು ನೆರವಾಗಬೇಕೆಂದು ಆಗ್ರಹಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕುಬೇರಪ್ಪ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗ್ರಾ.ಪಂ. ಮಾಜಿ ಸದಸ್ಯ ಹನುಮಂತಪ್ಪ, ಗೌಡ್ರು ಕರಿಬಸಪ್ಪ, ಮಂಜುನಾಥ್, ಕೆ.ಸಿ.ನಾಗಪ್ಪ, ಲೋಕೇಶಪ್ಪ, ಮಾಜಿ ಸದಸ್ಯರಾದ ಬಸವರಾಜಪ್ಪ, ಟಿ. ಹನುಮಂತಪ್ಪ, ಬಿ.ಬೀರಪ್ಪ, ಕೆ.ಕೆ.ವಿಜಯ್, ಮಾದಪ್ಪ ಮತ್ತಿತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

### ಇಂದು ರಾಣೇಬೆನ್ನೂರು ನಗರಸಭೆ ಚುನಾವಣೆ

# ಕಾಂಗ್ರೆಸ್ ಬಲ ವೃದ್ಧಿಸಬಹುದೇ ?

ರಾಣೇಬೆನ್ನೂರಿನ ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆ ಇಂದು ನಡೆಯಲಿದ್ದು, ನ್ಯಾಯಾಲಯದ ಆದೇಶದಂತೆ ಫಲಿತಾಂಶ ಮತಪೆಟ್ಟಿಗೆಯಲ್ಲಿಯೇ ಉಳಿಯಲಿದೆ ಎಂದು ಹೇಳಲಾಗುತ್ತಿದೆ.

ನಗರಸಭೆಯಲ್ಲಿ ಸಂಸದ, ವಿಧಾನ ಪರಿಷತ್ ಸದಸ್ಯ ಹಾಗೂ ಶಾಸಕರ ಮತಗಳು ಸೇರಿದಂತೆ ಒಟ್ಟು 38 ಸದಸ್ಯರಿದ್ದು, ಈ ಮೂವರೂ ಬಿಜೆಪಿಯವರಿದ್ದಾರೆ. ಕೆಪಿಜೆಪಿಯ ಒಬ್ಬರು ಹಾಗೂ ಪಕ್ಷೇತರರೊಬ್ಬರು ಈಗಾಗಲೇ ಬಿಜೆಪಿಗೆ ಬೆಂಬಲಿಸಿದ್ದರಿಂದ ಆಯ್ಕೆಯಾದ 15 ಸದಸ್ಯರು ಸೇರಿದಂತೆ ಬಿಜೆಪಿ ಬಲ 20ಕ್ಕೆ ಏರಿದ್ದು ಅಧಿಕಾರ ಹಿಡಿಯಲು ಅವಶ್ಯ ಬಲ ಸಿಕ್ಕಂತಾಗಿದೆ.

9 ಸದಸ್ಯರನ್ನು ಹೊಂದಿರುವ ಕೆಪಿಜೆಪಿಯವರು ಒಂದು ಸ್ಥಾನ ಕೇಳುತ್ತಿದ್ದು, ಈಗಾಗಲೇ ಅಧಿಕಾರ ಹಿಡಿಯುವ ಹಂತ ತಲುಪಿದ್ದರಿಂದ ಕೆಪಿಜೆಪಿಯವರ ಬೇಡಿಕೆಗೆ ಬಿಜೆಪಿ ಸೊಪ್ಪು ಹಾಕುತ್ತಿಲ್ಲವೆಂದು ಹೇಳಲಾಗುತ್ತಿದೆ. ಇದುವರೆಗೆ ಬಾಹ್ಯದಲ್ಲಿ ಕೆಪಿಜೆಪಿಯ ಸದಸ್ಯರು ಕಾಂಗ್ರೆಸ್ ಹಾಗೂ ಬಿಜೆಪಿ ಕಡೆಗೆ ಹಂಚಿ ಹೋಗಿದ್ದು ಕಂಡುಬರುತ್ತಿತ್ತಾದರೂ ಈಗ ಅವರೆಲ್ಲ ಒಂದಡೆ ಸೇರಿದ್ದಾರೆಂದು ಹೇಳಲಾಗುತ್ತಿದೆ.

ಕಳೆದ ಎರಡು ದಿನಗಳಿಂದ ನಡೆಯುತ್ತಿರುವ ರಾಜಕೀಯ ವಿದ್ಯಮಾನಗಳನ್ನು ಗಮನಿಸುತ್ತಿರುವ ಕಾಂಗ್ರೆಸ್ ಸದಸ್ಯರು ತಮ್ಮ ಬಲ ವೃದ್ಧಿಸಬಹುದು ಎನ್ನುವ ಆಸೆಯೊಂದಿಗೆ ನಿನ್ನೆ ಸಂಜೆ ಕೆ.ಬಿ. ಕೋಳಿವಾಡರ ಮನೆಯಲ್ಲಿ ಸಭೆ ಸೇರಿ ಚುನಾವಣೆಗೆ ನಾಮಪತ್ರ ಸಲ್ಲಿಸುವ ನಿರ್ಧಾರ ಕೈಗೊಂಡಿದ್ದಾರೆಂದು ತಿಳಿದುಬಂದಿದೆ.

ಮಂತ್ರಿಯಾಗುವ ಕನಸಿನಲ್ಲಿರುವ ಕೆಪಿಜೆಪಿ ಸಂಘಟಿಸಿದ್ದ ಎಂ.ಎಲ್.ಸಿ ಶಂಕರ್, ತಮ್ಮ ಸದಸ್ಯರನ್ನು ಹಿಡಿದಿಟ್ಟುಕೊಳ್ಳಲು ವಿಫಲವಾದರೆ ಕಾಂಗ್ರೆಸ್ ಬಲ ಹೆಚ್ಚಬಹುದು. ತಪ್ಪಿದರೆ ಕಾಂಗ್ರೆಸ್ ಯಥಾಸ್ಥಿತಿಯಲ್ಲಿದ್ದು ಅವಿರೋಧ ಆಯ್ಕೆ ತಪ್ಪಿಸಬಹುದು ಎನ್ನುವ ವಿಮರ್ಶೆ ನಗರದಲ್ಲಿ ನಡೆದಿದೆ.

### ನಗರದಲ್ಲಿ ಇಂದು ಕನ್ನಡ ರಾಜ್ಯೋತ್ಸವ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಮತ್ತು ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಇವರುಗಳ ಸಂಯುಕ್ತಾಶ್ರಯದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭವು ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಆವರಣದಲ್ಲಿ ಇಂದು ನಡೆಯಲಿದೆ. ಬೆಳಿಗ್ಗೆ 10.05ಕ್ಕೆ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ರಾಜ್ಯಾಧ್ಯಕ್ಷ ವೈ.ಕೆ.ಮುದ್ದುಕೃಷ್ಣ ಸಮಾರಂಭವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಗರ ಶ್ರೀನಿವಾಸ್ ಉಡುಪ, ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ. ಆರ್.ಪರಮೇಶ್ವರಪ್ಪ, ಡಯಟ್ ಸಂಸ್ಥೆಯ ಉಪನಿರ್ದೇಶಕ ಹೆಚ್.ಕೆ.ಲಿಂಗರಾಜ್, ಎಲೆಬೇತೂರಿನ ನಂದಿ ಎಂಟರ್‌ಪ್ರೈಸಸ್‌ನ ವ್ಯವಸ್ಥಾಪಕ ನಿರ್ದೇಶಕ ತೇಜಸ್ವಿನಿ ಪ್ರಕಾಶ್ ಆಗಮಿಸಲಿದ್ದಾರೆ. ಕಲಾಕುಂಚದ ಸಂಸ್ಥೆಯ ಅಧ್ಯಕ್ಷ ಕೆ.ಹೆಚ್.ಮಂಜುನಾಥ್ ಅಧ್ಯಕ್ಷತೆ ವಹಿಸುವರು.

# ಜಿಲ್ಲಾ ಪೊಲೀಸರಿಂದ ಏಕತಾ ನಡಿಗೆ



### ರಾಷ್ಟ್ರೀಯ ಏಕತಾ ದಿನ


ದಾವಣಗೆರೆ, ಅ.31- ರಾಷ್ಟ್ರೀಯ ಏಕತಾ ದಿನದ ಅಂಗವಾಗಿ ದಾವಣಗೆರೆ ಜಿಲ್ಲಾ ಪೊಲೀಸ್ ವತಿಯಿಂದ ನಗರದಲ್ಲಿ ಇಂದು ಸಂಜೆ 'ಏಕತಾ ನಡಿಗೆ' ನಡೆಸಲಾಯಿತು.

ಈ ನಡಿಗೆಗೆ ಪೊಲೀಸ್ ಅಧೀಕ್ಷಕ ಹನುಮಂತರಾಯ ಚಾಲನೆ ನೀಡಿದರು. ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಿಂದ ಆರಂಭಗೊಂಡ ನಡಿಗೆಯು ಅಕ್ಕಮಹಾದೇವಿ ರಸ್ತೆ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ವೃತ್ತ ಮೂಲಕ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದವರೆಗೆ ಪೊಲೀಸ್ ಅಧಿಕಾರಿ ಗಳು ಮತ್ತು ಸಿಬ್ಬಂದಿಗಳು ಎಸ್ಪಿ ಹನುಮಂತರಾಯ ನೇತೃತ್ವದಲ್ಲಿ ಹೆಜ್ಜೆ ಹಾಕಿ ಸಾರ್ವಜನಿಕರ ಗಮನ ಸೆಳೆದು ಏಕತೆಯ ಸಂದೇಶ ಸಾರಿದರು.

ಈ ನಡಿಗೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ. ರಾಜೀವ್, ಡಿವೈಎಸ್ಪಿ ನಾಗೇಶ್ ಐತಾಳ್, ಪಿ.ಬಿ. ಪ್ರಕಾಶ್, ಪೊಲೀಸ್ ನಿರೀಕ್ಷಕ ಗುರುಬಸವರಾಜ, ಗಜೇಂದ್ರಪ್ಪ, ಕಿರಣ್ ಕುಮಾರ್, ಪಿಎಸ್‌ಐಗಳು ಹಾಗೂ ಪೊಲೀಸ್ ಸಿಬ್ಬಂದಿಗಳು ಮತ್ತು ಪೊಲೀಸ್ ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.

# ಕಸಾಪದಿಂದ ಇಂದಿನಿಂದ 1 ತಿಂಗಳು ಅಂತರ್ಜಾಲದಲ್ಲಿ ಕನ್ನಡ ನುಡಿ ಹಬ್ಬ

## ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ನೇತೃತ್ವದಲ್ಲಿ ಕಾರ್ಯಕ್ರಮ





ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 65ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಇಂದಿನಿಂದ ಇದೇ ದಿನಾಂಕ 30ರವರೆಗೆ ಪ್ರತಿದಿನ ಸಂಜೆ 6 ರಿಂದ 7ರವರೆಗೆ ಒಂದು ತಿಂಗಳ ಕಾಲ ಅಂತರ್ಜಾಲದ ಮೂಲಕ ಕನ್ನಡ ನುಡಿ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನಾಡಿನ ಹಿರಿಯ ಕವಿ ಡಾ. ಹೆಚ್.ಎಸ್. ವೆಂಕಟೇಶ ಮೂರ್ತಿ ಈ ಕಾರ್ಯಕ್ರ ಮವನ್ನು ಉದ್ಘಾಟಿಸಲಿದ್ದು, ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಪ್ರಾಸ್ತಾವಿಕ ನುಡಿಗಳನ್ನಾಡುವರು.

'ಕನ್ನಡವೆನೆ ಕುಣಿದಾಡುವುದೆನ್ನದೆ, ಕನ್ನಡವೆನೆ ಕಿವಿ ನಿಮಿರುವುದು' ! ವಿಷಯ ಕುರಿತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಸಾಹಿತಿ ಎಸ್.ಟಿ. ಶಾಂತಗಂಗಾಧರ ಅವರು ಉಪನ್ಯಾಸ ನೀಡುವರು.

ಪ್ರತಿದಿನ ಉಪನ್ಯಾಸದ ಮೊದಲ ಮತ್ತು ನಂತರ 15 ನಿಮಿಷಗಳ ಕಾಲ ಸುಗಮ ಸಂಗೀತವಿರುತ್ತದೆ. ಈ ಕಾರ್ಯಕ್ರಮವನ್ನು ವಿನೂತನ ಮಹಿಳಾ ಸಮಾಜ, ಕದಳಿ ಮಹಿಳಾ ವೇದಿಕೆ, ಸುಶ್ರಾವ್ಯ ಸಂಗೀತ ವಿದ್ಯಾಲಯ, ಬೆಳಕು ಜಾನಪದ ಕಲಾ ತಂಡ ನಡೆಸಿಕೊಡಲಿದೆ.

ತಾಲ್ಲೂಕು ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಕನ್ನಡಾಭಿಮಾನಿಗಳು, ಸಾರ್ವಜನಿಕರು, ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFn-hAxce4UwjPsYg ಮುಖಾಂತರ ಕಾರ್ಯಕ್ರಮವನ್ನು ವೀಕ್ಷಿಸಬಹುದು.

# ಜಿಗಳಿಯಲ್ಲಿ ಸಂಭ್ರಮದ ವಾಲ್ಮೀಕಿ ಜಯಂತಿ



ಮಲೇಬೆನ್ನೂರು, ಅ.31 - ಜಿಗಳಿ ಗ್ರಾಮದಲ್ಲಿ ಆದಿಕವಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು. ಗ್ರಾಮ ಪಂಚಾಯಿತಿ ಕಛೇರಿ, ಸ.ಹಿ. ಪ್ರಾ ಶಾಲೆ ಮತ್ತು ವಾಲ್ಮೀಕಿ ವೃತ್ತದಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಲಾಯಿತು.

ಶಿಕ್ಷಕ ಮಲ್ಲಿಕಾರ್ಜುನ್ ಮಾತನಾಡಿದರು. ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಿ.ಪಿ. ಹನುಮನಗೌಡ, ಗ್ರಾ.ಪಂ. ಮಾಜಿ ಸದಸ್ಯ ಡಿ.ಎಂ. ಹರೀಶ್, ಜೆ. ಕೃಷ್ಣಮೂರ್ತಿ, ಮುಖಂಡರಾದ ಬಳಸನೂರು ಚಂದ್ರಪ್ಪ, ಬಿ.ಸೋಮಶೇಖರಚಾರಿ, ಕೆ.ಎಂ. ರಾಯಪ್ಪ, ಕೆ.ಎಸ್ ನಂದ್ಯಪ್ಪ, ನಿಟ್ಟುವಳ್ಳಿ ಕರಿಬಸಪ್ಪ, ಕೆ.ಹೆಚ್. ಬಸವರಾಜ್, ಬೆಣ್ಣೇರ ನಂದ್ಯಪ್ಪ, ನಿಂಗಪ್ಪ, ಪಾಲಾಕ್ಷಪ್ಪ, ಚಂದ್ರಪ್ಪ, ಪಿಡಿಓ ದಾಸರ ರವಿ, ಗ್ರಾ.ಪಂ. ಕಾರ್ಯದರ್ಶಿ ಶೇಖರ್ ನಾಯ್ಕ್, ಬಿಲ್ ಕಲೆಕ್ಟರ್ ಬಿ.ಮೌನೇಶ್, ಬಸವರಾಜಯ್ಯ, ಮುತ್ತು, ರಂಗಪ್ಪ, ಶಾಲಾ ಮುಖ್ಯ ಶಿಕ್ಷಕ ಕರಿಬಸಪ್ಪ, ಶಿಕ್ಷಕರಾದ ಶ್ರೀನಿವಾಸ ರೆಡ್ಡಿ, ಗುಡ್ಡಪ್ಪ, ಲೋಕೇಶ್, ವೀಣಾ, ದೀಪಾ ಮತ್ತಿತರರು ಭಾಗವಹಿಸಿದ್ದರು.

**ಏಕತಾ ಪ್ರತಿಜ್ಞೆ:** ದೇಶದ ಮಾಜಿ ಉಪ ಪ್ರಧಾನಿ ಸ್ವಾತಂತ್ರ್ಯ ಹೋರಾಟಗಾರ, ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಬಾಯ್ ಪಟೇಲ್ ಅವರ ಜನ್ಮದಿನದ ಅಂಗವಾಗಿ ಗ್ರಾ.ಪಂ ಕಛೇರಿಯಲ್ಲಿ ರಾಷ್ಟ್ರೀಯ ಏಕತಾ ದಿನವನ್ನು ಆಚರಿಸಲಾಯಿತು. ಗ್ರಾ.ಪಂ ಪಿಡಿಓ ದಾಸರ ರವಿ ಅವರು ಗ್ರಾ.ಪಂ. ಸಿಬ್ಬಂದಿ ಹಾಗೂ ಗ್ರಾಮಸ್ಥರಿಗೆ ಏಕತಾ ಪ್ರತಿಜ್ಞೆ ಬೋಧಿಸಿದರು.

# ಉಪ ಚುನಾವಣೆ ನಂತರ ಮುನಿರತ್ನ ಸಚಿವ : ಸಿಎಂ

ಬೆಂಗಳೂರು, ಅ. 31 - ಉಪಚುನಾವಣೆಯ ಫಲಿತಾಂಶದ ನಂತರ ಮಂತ್ರಿಮಂಡಲ ವಿಸ್ತರಿಸಲಿದ್ದು, ಮುನಿರತ್ನ ಸಚಿವರಾಗಲಿದ್ದಾರೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ಘೋಷಣೆ ಮಾಡಿದ್ದಾರೆ.

ರಾಜರಾಜೇಶ್ವರಿ ಕ್ಷೇತ್ರದಲ್ಲಿ ಮುನಿರತ್ನ ಪರ ಪ್ರಚಾರ ನಡೆಸುವ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಸಂಪುಟ ವಿಸ್ತರಣೆಯ ಮಾತುಗಳನ್ನು ಆಡಿದ್ದಾರೆ. ಮುನಿರತ್ನ ಗೆದ್ದಾಗಿದೆ. ಅಂತರ ಎಷ್ಟು ಎಂದು ತಿಳಿಯಬೇಕಷ್ಟೆ. 40 ರಿಂದ 50 ಸಾವಿರ ಮತಗಳ ಅಂತರದಲ್ಲಿ ಗೆಲ್ಲಿಸಿಕೊಡಿ ಎಂದು ಮತದಾರರನ್ನು ಕೋರಿದ್ದಾರೆ.

ಫಲಿತಾಂಶ ಬಂದ ತಕ್ಷಣವೇ ದೆಹಲಿಗೆ ತೆರಳಿ, ವರಿಷ್ಠರೊಟ್ಟಿಗೆ ಸಮಾಲೋಚನೆ ನಡೆಸಿ, ಮಂತ್ರಿಮಂಡಲ ವಿಸ್ತರಿಸುತ್ತೇನೆ. ಈ ಸಂದರ್ಭದಲ್ಲಿ ಮುನಿರತ್ನ ಸಚಿವರಾಗಿ ಸೇರ್ಪಡೆಗೊಳ್ಳುತ್ತಾರೆ ಎಂದು ಹೇಳಿದ್ದಾರೆ.

ಕ್ಷೇತ್ರದ ಜನತೆ ಮುನಿರತ್ನ ಅವರನ್ನು ಬಹು ಅಂತರದಲ್ಲಿ ಗೆಲ್ಲಿಸಿಕೊಟ್ಟರೆ, ನಿಮಗೆ ಮತ್ತಷ್ಟು ಅಭಿವೃದ್ಧಿ ಕಾರ್ಯಗಳು ನಡೆಯಲಿವೆ. ಅವರು ಸಚಿವರಾಗಿ ರಾಜ್ಯದ ಕೆಲಸವನ್ನೂ ಮಾಡಬಹುದು ಎಂದವರು ಹೇಳಿದ್ದಾರೆ.


## ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ
ಆಡಳಿತ ಮಂಡಳಿಗೆ ವೃತ್ತಿಪರ ನಿರ್ದೇಶಕರಾಗಿ
ನೇಮಕಗೊಂಡಿರುವ ಹಿರಿಯ ನ್ಯಾಯವಾದಿಗಳೂ
ಹಾಗೂ ನಮ್ಮೆಲ್ಲರ ಆತ್ಮೀಯ ಮಿತ್ರರಾದ

**ಶ್ರೀ ಮಲ್ಲಿಕಾರ್ಜುನ ಕಣವಿ**

ಅವರಿಗೆ ಹಾರ್ದಿಕ ಅಭಿನಂದನೆಗಳು.

**ವಿ.ಬಿ. ಮಾಗನೂರ್**
ವಿಶ್ರಾಂತ ಉಪಕುಲಪತಿಗಳು, ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ, ಹುಬ್ಬಳ್ಳಿ.

**ಎಸ್.ಎಲ್. ವೆಂಕಟೇಶಮೂರ್ತಿ**
ವಿಶ್ರಾಂತ ಹಿರಿಯ ಅಧಿಕಾರಿಗಳು, ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ., ಬೆಂಗಳೂರು.

**ಪ್ರಕಾಶ್ ವಸ್ತ್ರದ್**
ವಿಶ್ರಾಂತ ಹಿರಿಯ ವ್ಯವಸ್ಥಾಪಕರು, ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್, ದಾವಣಗೆರೆ.

**ಟಿ.ಎಂ. ಬಸವರಾಜಯ್ಯ**
ವಿಶ್ರಾಂತ ವ್ಯವಸ್ಥಾಪಕರು, ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್, ದಾವಣಗೆರೆ.

**ಎಂ.ಕೆ. ಬಕ್ಕಪ್ಪ**
ಸಹ ಕಾರ್ಯದರ್ಶಿ, ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ.) ದಾವಣಗೆರೆ.

**ಹೆಚ್.ಎಂ. ವಿಶ್ವನಾಥ್**
ನಿರ್ದೇಶಕರು, ಸಿಟಿ ಕೋ-ಆಪ್. ಬ್ಯಾಂಕ್, ದಾವಣಗೆರೆ.

**ಎಸ್.ಆರ್. ಚಂದ್ರಶೇಖರ್**
ಹಿರಿಯ ನ್ಯಾಯವಾದಿಗಳು, ದಾವಣಗೆರೆ.

**ವೆಂಕಟೇಶ್ ಬಿ. ತಾತೂಸ್ಕರ್**
ವಿಶ್ರಾಂತ ವ್ಯವಸ್ಥಾಪಕರು, ಸಾಂಗ್ಲಿ ಬ್ಯಾಂಕ್, ಹುಬ್ಬಳ್ಳಿ - ದಾವಣಗೆರೆ.



# ಅಂತರ್ಜಾಲ ರಾಷ್ಟ್ರೀಯ ನಾಟಕೋತ್ಸವಕ್ಕೆ ಶುಭಾಶಯಗಳು

"ಶರಣರ ಬರವೆಮಗೆ ಪ್ರಾಣ ಜೀವಾಳವಯ್ಯ" ಕಲೆ-ಸಂಗೀತ, ಸಾಂಸ್ಕೃತಿಕ, ರಾಜಕೀಯ ಶಿಕ್ಷಣ, ಸಾಮಾಜಿಕ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವವರಿಗೆ 'ಸಾಣೇ' ಹಿಡಿಯುವಂತಹ ರಂಗನಾಡು 'ಸಾಣೇಹಳ್ಳಿ' ರಂಗಭೂಮಿ ಕ್ಷೇತ್ರಕ್ಕೆ ಕಾಶಿಯಿದ್ದಂತೆ. ರಂಗಭೂಮಿಯ ಧ್ರುವತಾರೆ, ಸದಾಕಾಲ ಸಾಮಾಜಿಕ ಚಿಕಿತ್ಸಕ ಹಾದಿಯಲ್ಲಿ ನಡೆದು ಕಳೆದ ಹತ್ತು ವರ್ಷಗಳಲ್ಲಿ ಅಂತಾರಾಷ್ಟ್ರೀಯ ನಾಟಕೋತ್ಸವದ ಮೂಲಕ ಜನಮಾನಸದಲ್ಲಿ ಶಾಶ್ವತವಾಗಿ ಅಚ್ಚೊತ್ತಿರುವ ನಾಡಿನ ಶ್ರೇಷ್ಠ ಸಂತರಲ್ಲಿ ಒಬ್ಬರಾದ 'ಕಾಯಕ ದಾಸೋಹ ಮತ್ತು ಶಿವಸಂಚಾರ' ಎಂಬ ಕಲಾಸಂಘದ ಮೂಲಕ ನಾಟಕಗಳನ್ನು ರಚಿಸಿ, ವಿಶ್ವದೆಲ್ಲೆಡೆ ಸಂಚರಿಸಿ, ಅಭಿನಯಿಸಿ ರಂಗಭೂಮಿಯ ಅಭಿರುಚಿಯನ್ನು ಇಂದಿನ ಪೀಳಿಗೆಗೆ ಉಣಬಡಿಸಲ್ಪಟ್ಟು, ಸದಾಕಾಲ ಕಲಾಕ್ರಾಂತಿ ಮಾಡಿದ ರಂಗಜಂಗಮ ಎಂದೇ ಹೆಸರಾದ ನಾಡಿನ ಹೆಸರಾಂತ ತರಳುಬಾಳು ಮಠದ **ಪರಮಪೂಜ್ಯ ಡಾ|| ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿ**ಗಳ ನೇತೃತ್ವದಲ್ಲಿ ಆಯೋಜಿಸಿರುವ ಈ ವರ್ಷದ

## 'ಅಂತರ್ಜಾಲ ರಾಷ್ಟ್ರೀಯ ನಾಟಕೋತ್ಸವ'ಕ್ಕೆ

ನಮ್ಮ ಭಕ್ತವೃಂದದ ಪರವಾಗಿ ಭಕ್ತಿಪೂರ್ವಕ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಸರ್ವ ಶರಣ-ಶರಣೆಯರಿಗೂ ಸುಸ್ವಾಗತ.



**ಸ್ವಾಗತ ಕೋರುವವರು**

## ಶ್ರೀ ಶ್ರೀನಿವಾಸ್ ದಾಸಕರಿಯಪ್ಪ

ಬಿಜೆಪಿ ಯುವ ಮುಖಂಡರು, ದಾವಣಗೆರೆ



ಗ್ರಾಹಕರ ಸೇವೆಯೇ ಮುಖ್ಯ ಗುರಿಯನ್ನಾಗಿಸಿಕೊಂಡಿರುವ ನಿಮ್ಮ 'ರವಿತೇಜ'

# ಈಗ ಮತ್ತೊಂದು ಹೊಸ ಶೋರೂಂ ವಿಜಯಲಕ್ಷ್ಮಿ ರಸ್ತೆಯಲ್ಲಿ

## 'ರವಿತೇಜ' ಸಿಲ್ಕ್ಸ್ & ಸ್ಯಾರೀಸ್




ಉತ್ತಮ ಆಯ್ಕೆಗಾಗಿ ಇಂದೇ ಭೇಟಿ ಕೊಡಿ

# Raviteja

Textiles

Silk Sarees | Mens Ware | Kids Ware

**Raviteja Textiles,** Chamarajpet Ph. : 82963 50074
**Raviteja Garments,** Chamarajpet Ph. : 98800 32999
**Raviteja's,** Vidyanagar Ph. : 98803 82611
**Raviteja Fashion,** Chetana Hotel Road Road Ph. :95916 33871
**Raviteja Silks & Sarees,** Vijayalakshmi Road Ph. : 9844466844, 97419 53993

ವಿ.ಸೂ. : ಸಮಯದ ಅಭಾವದಿಂದ ವೈಯಕ್ತಿಕವಾಗಿ ಆಹ್ವಾನಿಸಲು ಸಾಧ್ಯವಾಗಿಲ್ಲ. ಕಾರಣ ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



Bapuji Educational Association (Regd.)

**Bapuji Institute of Engineering & Technology**
Affiliated to Visvesvaraya Technological University, Belagavi | Approved by AICTE, New Delhi | NAAC Accredited with 'A' Grade
PGCET College Code B132

**Bapuji Academy of Management & Research**
Affiliated to Davangere University, Davangere | Approved by AICTE, New Delhi
PGCET College Code B133

Transforming Lives . . . . .



Learning Partners: vmedulife, Orell, coursera

Thank you for being part of 2020 Placements

ICICI Bank, DMart, airtel, CSB Bank, AXIS BANK, Justdial, TATA AIG, Muthoot Finance, BYJU'S, Business Services, STOREKING, Chola MS, black&white, Max Bupa, Moody's Analytics, IDFC FIRST Bank, Woodpecker, CPMC INDIA, ANANDRATHI, VAN HEUSEN, Birla Sun Life Insurance, QUESS, MAHARAJ

BAPUJI B-Schools Celebrating 23 Years

# TWO YEAR FULL-TIME MBA

ADMISSIONS OPEN

www.bapuji-mba.org
www.bapujiamr.org




- Best teaching methodologies adopted to support "Experiential Learning"
- World Class Infrastructure Housed in a "Green Campus"
- Faculty with expertise in Teaching, Research and Extension
- Excellent Placement & Strong Alumni network across globe
- Digital Library powered by D-Space & equipped with latest devices
- In-Campus executive hostel facility for Boys and Girls

For Admission, Contact:
**The Director,** Bapuji B-Schools
+91 9886242527, 08192 220501

+91 9886242527 | Find us on YouTube | /bapujibschools | /bapuji_bschools | /bapuji_b-schools

**Bapuji B-Schools**
Lake View Campus
S S Layout
Davangere - 577004

**Dr. Shamanur Shivashankarappa**
Hon. Secretary, BEA
Ex-Minister & MLA ,Davangere South

**Sri. S S Mallikarjuna**
Hon. Joint Secretary, BEA
Ex-Minister & Ex-MLA

**Sri. Athani S Veeranna**
Chairman
Bapuji B-Schools


**JANATHAVANI -** Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte